13 Smt. Yellava Sambrani
14 Sri M. Y. Ghorpade
15 Sri N. Huchamasthy Gowda "

The motion was adopted.

Mr. SPEAKER.—Under sub-rule (2) of rule 240 of the Rules of Procedure and Conduct of Business in the Mysore Legislative Assembly, I nominate the Minister in charge of the the Department, namely the Minister for Public Works and the Minister for Law as Members of the Joint Select Committee.

THE MYSORE COTTON CONTROL BILL, 1963

Motion to consider.

Sri G. NARAYANA COWDA (Minister for Agriculture).—Sir, I beg to move:

"That the Mysore Cotton Control Bill, 1963 be taken into consideration."

Mr. SPEAKER.—Motion moved:

"That the Mysore Cotton Control Bill, 1963 be taken into consideration."

† ಶ್ರೀ ಜಿ. ನಾರಾಯಣ ಗೌಡ--.ಸ್ವಾಮಿ, ಈಗ ನಮ್ಮ ರಾಜ್ಯದೊಳಗೆ ಒಂದು ಏಕರೂಪವಾದ ಕಾನೂನು ನ್ನು ಮಾಡುವ ಉದ್ದೇಶದಿಂದ ಈ ಕಾಟನ್ ಕಂಟ್ರೋಲ್ ಬಿಲ್ಲನ್ನು ಇಲ್ಲಿ ಮಂಡಿಸಲಾಗಿದೆ. ಈಗಿರುವ ಹಾಗೆ ಬೊಂಬಾಯಿ ಕರ್ನಾಟಕದಲ್ಲಿ 1942ನೆ ಕಾಟನ್ ಕಂಟ್ರೋಲ್ ಆಕ್ಟ್ ಜಾರಿಯಲ್ಲಿದೆ. ಹಾಗೂ ಹೈದರಾಬಾದಿನಲ್ಲಿ ಫಸಲಿ 1337ರ ಕಾಟನ್ ಕಲ್ಟಿವೇಷನ್ ಮತ್ತು ಟ್ರಾನ್ಸ್‌ಪೋರ್ಟ್ ಆಕ್ಟ್ ಜಾರಿಯಲ್ಲಿದೆ. ಮದ್ರಾಸಿನೊಳಗೆ 1952ನೇ ಆಕ್ಟ್ ಜಾರಿಯಲ್ಲಿದೆ ಹಳೇ ಮೈಸೂರಿನಲ್ಲಿ ಮೈಸೂರು ಕಾಟನ್ ಕಂಟ್ರೋಲ್ ಆಕ್ಟ್ 1942 ಜಾರಿಯಲ್ಲಿದೆ. ಹೀಗೆ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಕಾನೂನು ಜಾರಿಯಲ್ಲಿರುವಾಗ ಏಕರೂಪವಾದ ಒಂದು ಕಾನೂನು ಆಗಬೇಕು. ಅದಕ್ಕೋಸ್ಕರವಾಗಿ ಮತ್ತು ಇಂಡಿಯಾ ಸರ್ಕಾರದವರು ಅನೇಕ ಬಾರಿ ಒಂದು ಏಕರೂಪವಾದ ಶಾಸನವನ್ನು ಮಾಡಿ ಎಂದೂ, ಹಾಗೂ ಸೆಂಟ್ರಲ್ ಕಾಟನ್ ಕಮಿಟಿಯವರು ಸಹಿತ ಇದನ್ನು ಪದೇ ಪದೇ ನಮಗೆ ಹೇಳುತ್ತ ಬಂದದ್ದರಿಂದ ಇವತ್ತಿನ ದಿವಸ ಏಕರೂಪವಾದ ಕಾನೂನನ್ನು ಮಾಡುವುದಕ್ಕೋಸ್ಕರ ಈ ಮಸೂದೆಯನ್ನು ಮಾನ್ಯಸಭೆಯ ಮುಂದೆ ಇಟ್ಟಿದ್ದೇನೆ. ಈ ಮಸೂದೆಯನ್ನು ತಂದಿರುವ ಉದ್ದೇಶ ನಮ್ಮ ಹತ್ತಿಯ ಕ್ವಾಲಿಟಿ ಮತ್ತು ಅದರ ಪರ್ಚೆಸ್ಯಿಜೇಷನ್ ಹೆಚ್ಚು ಮಾಡಬೇಕು, ಆ ರೀತಿಯಾಗಿ ಆದರಿಂದ ಹತ್ತಿ ಬೆಳೆಯುವವರಿಗೆ ಒಟ್ಟಿನಲ್ಲಿ ದೇಶದ ಆರ್ಥಿಕ ಭದ್ರತೆಗೆ ಹೆಚ್ಚು ಸಹಾಯವಾದೀತು ಎಂದು ತಿಳಿದು ಕೆಲವು ನಿಯಮಗಳನ್ನು ಮಾಡಿ ಆದನ್ನು ಕಾರ್ಯರೂಪಕ್ಕೆ ತರುವುದಕ್ಕೋಸ್ಕರವಾಗಿ ಈ ಮಸೂದೆಯನ್ನು ತಂದಿದೆ.

[MR. DEPUTY SPEAKER in the Chair.]

ಇಲ್ಲಿ ಸುಧಾರಿತ ಬೀಜ ಉಪಯೋಗಿಸುವುದು, ಎಲ್ಲೆಲ್ಲಿ ಯಾವ ಯಾವ ಬೀಜವನ್ನು ಉಪಯೋಗಿಸಬೇಕು, ಆ ಬೀಜವನ್ನು ಮಾರಾಟ ಮಾಡುವವರು ಸಹಿತ ಅಧಿಕೃತ ಮಾರಾಟಗಾರರಾಗಬೇಕು, ಜಿನ್ನಿಂಗ್ ಫ್ಯಾಕ್ಟರಿ ಮತ್ತು ಬೇರೆ ಫ್ಯಾಕ್ಟರಿಗಳಲ್ಲಿ ಆ ಪ್ರದೇಶದಲ್ಲಿ ಬೆಳೆಯುವ ಯಾವುದೇ ಹತ್ತಿಯನ್ನು ಬೇರೆ ಹತ್ತಿಯೊಂದಿಗೆ ವಿಶ್ರ ಮಾಡದೆ ಇರುವುದು, ಇದನ್ನೆಲ್ಲ ಕಾರ್ಯರೂಪಕ್ಕೆ ತರುವುದಕ್ಕಾಗಿ ಈ ಮಸೂದೆಯನ್ನು ಮಾನ್ಯಸಭೆಯ ಮುಂದೆ ತಂದಿದೆ. ಹಾಗೂ ಈ ಮಸೂದೆಯೊಳಗೆ ಸಾಮಾನ್ಯವಾಗಿ ಎರಡನೆ ನಿಯಮದ ಪ್ರಕಾರ ಕಂಟ್ರೋಲ್ಡ್ ಏರಿಯಾ, ಕಾಟನ್ ಲೈಸೆನ್ಸಿಂಗ್ ಬೋರ್ಡ್ ಇಂಥ

(ಶ್ರೀ ಜಿ. ನಾರಾಯಣಗೌಡ)

ಕೆಲವು ವಿಷಯಗಳಿಗೆ ಅರ್ಥ ವಿವರಣೆಯನ್ನು ಕೊಡರಾಗಿದೆ. ಅದರೊಳಗೆ ಮೂರನೆ ನಿಯಮದಲ್ಲಿ ಯಾವ ಯಾವ ವೆರೈಟಿಯನ್ನು ಎಲ್ಲೆಲ್ಲಿ ಬೆಳೆಯಬೇಕು, ಅವನ್ನು ಹೇಗೆ ಬೆಳೆಯಬೇಕು, ಅದನ್ನು ಹೇಗೆ ಪೋಷಣೆ ಮಾಡಬೇಕು ಎಂಬ ವಿಷಯಗಳ ಬಗ್ಗೆ ತಿಳಿಸಿದೆ. ಹತ್ತಿ ಬೆಳೆಯುವುದರ ಬಗ್ಗೆ ಆಕ್ಷೇಪಣೆ, ಸಲಹೆ, ಮಾಡಲು ಈ ಹೊತ್ತಲ್ಲ ಅವಕಾಶವಿರಲ್ಲ. ಈ ಮಸೂದೆಯ 3ನೇ ವಿಧಿ ಜಾರಿಗೆ ಬಂದ ಮೇಲೆ ಇದಕ್ಕೆ ಅವಕಾಶವಿದೆ. ಬೊಂಬಾಯಿ ಕರ್ನಾಟಕ ಪ್ರದೇಶದಲ್ಲಿ ಯಾವ ಕಾನೂನು ಜಾರಿಯಲ್ಲಿದೆಯೋ ಅದರಲ್ಲಿರುವ ಹಾಗೆ ಈ ಮಸೂದೆಯಲ್ಲಿ ಅಡಕಗೊಳಿಸಲಾಗಿದೆ. 4ನೇ ವಿಧಿಯಲ್ಲಿ ಸಾಧಾರಣವಾಗಿ ಯಾವ ಹತ್ತಿ ಯಾರು ಮಾರಬೇಕು, ಮಾರಾಟಗಾರರು ಲೆಸೆನ್ಸ್ ಪಡೆದಿರಬೇಕು ಎಂದಿದೆ. ಇನ್ನು ಹತ್ತಿ ಮಿಕ್ಸ್‌ಮಾಡುವ ಬಗ್ಗೆ ನಿಷೇಧ ಇರುವುದರಿಂದ 5ನೇ ವಿಧಿಯಲ್ಲಿ ಈ ಬಗ್ಗೆ ಹತ್ತಿ ಗಿರಣಿಗಳಿಗೆ ರೈಸೆನ್ಸ್ ಕೊಡುವ ಅಧಿಕಾರ ಅಡಕವಾಗಿದೆ. ಇದಲ್ಲದೆ ತಪ್ಪು ಮಾಡುವವರಿಗೆ ಶಿಕ್ಷೆ ವಿಧಿಸುವುದು ಹೆನೆಲ್ಟ್ ಕ್ಲಾಜಿನಲ್ಲಿ ಅಡಕವಾಗಿದೆ. ಈ ಮಾನ್ಯ ಸಭೆಯು ಮುಂದೆ ಇಟ್ಟಿರುವ ಮಸೂದೆಗೆ ಎಲ್ಲರೂ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಕೊನೆಯುದಾಗಿ ಒಂದು ವಿಷಯ ಸಭೆಯ ಗಮನಕ್ಕೆ ತರುತ್ತೇನೆ. ಈ ಮಸೂದೆಯಲ್ಲಿ ಒಂದೆರಡು ಪ್ರಿಂಟಿಂಗ್ ಎರರ್ಸ್ ಇವೆ. ಅವುಗಳನ್ನು ದಯವಿಟ್ಟು ತಿದ್ದುಕೊಳ್ಳಬೇಕಾಗಿ ಸೂಚಿಸುತ್ತೇನೆ. 5ನೇ ಶೆಡ್ಯೂಲಿನಲ್ಲಿ 5ನೇ ಕ್ಲಾಜಿನಲ್ಲಿ into yard or cloth ಎಂದಿದೆ. ಯಾರ್ಡ್ ಎಂಬುದನ್ನು ಯಾರ್ಡ ಎಂದು ತಿದ್ದಿಕೊಳ್ಳಬೇಕು ? ಇದಲ್ಲದೆ 13ನೇ ಪುಟದಲ್ಲಿ 1ನೇ ಪ್ಯಾರಾದಲ್ಲಿ ಕಾಂಪೆನ್‌ಸೇಷನ್ ಎಂದು ಇರುವುದನ್ನು ಕಾಂಪೋಜಿಷನ್ ಎಂದು ತಿದ್ದಿಕೊಳ್ಳಬೇಕು. ಈ ಎರಡು ತಿದ್ದುಪಡಿಗಳೊಂದಿಗೆ ಈ ಮಸೂದೆಯನ್ನು ಪರಿಶೀಲಿಸಬೇಕೆಂದು ಪ್ರಾರ್ಥಿಸುತ್ತೇನೆ.

3-00 P.M.

†ಶ್ರೀ ಸಿದ್ದಯ್ಯ ಕಾತೀಮಠ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ಮಸೂದೆ ಮಂಡಿಸುತ್ತಾ ಹೇಳಿದ ಹಾಗೆ ಬೇರೆ ಪ್ರದೇಶದಲ್ಲಿ ಜಾರಿಯಲ್ಲಿರುವ ಕಾನೂನನ್ನು ಇದರಲ್ಲಿ ಅಳವಡಿಸಿದ್ದಾರೆ. ಈ ಕಾನೂನಿನಿಂದ ಆಗತಕ್ಕ ತೊಂದರೆಗಳನ್ನು ತಿಳಿಸಿಹೇಳಲು ಬಯಸುತ್ತೇನೆ. ಮೊಟ್ಟ ಮೊದಲಿಗೆ ನಮ್ಮ ರಾಜ್ಯದಲ್ಲಿ ಹತ್ತಿ ಬೆಳೆಯುತಕ್ಕಂಥ ಜನರಿಗೆ ಎಷ್ಟು ಬೀಜ ಬೇಕಾಗುತ್ತದೆ ಎಂಬುದನ್ನು ಹೇಳಲಿಲ್ಲ. ನಮ್ಮ ರಾಜ್ಯದಲ್ಲಿರತಕ್ಕ ಫಾರ್ಮಗಳಿಂದ ನಾಕಷ್ಟು ಬೀಜ ಸಿಕ್ಕದೆ ರೈತರಿಗೆ ತೊಂದರೆಯಾಗಿದೆ. ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಕೆಲವೇ ಸೀಡ ಫಾರ್ಮ ಇದ್ದು ಸರಿಯಾಗಿ ಬೀಜ ದೊರಕದೆ ತೊಂದರೆಯಾಗಿದೆ. ಇಂಥ ಪರಿಸ್ಥಿತಿಯಲ್ಲಿ ಸರಕಾರ ನಾಕಷ್ಟು ಬೀಜ ಪೂರೈಕೆಮಾಡದೆ ರೈತನ ತಲೆಯ ಮೇಲೆ ಕಾನೂನಿನ ಹೊರೆ ಮತ್ತೆ ಹೇರುವುದು ಒಳ್ಳೆಯದಲ್ಲ ಎಂದು ಹೇಳಬಯಸುತ್ತೇನೆ. ಈ ಬಗ್ಗೆ ಸರಕಾರ ಸರ್ವೆ ಮಾಡಿಲ್ಲ. ಹತ್ತಿ ಬೆಳೆಯತಕ್ಕಂಥ ಜನ ಎಷ್ಟು ಇದ್ದಾರೆ, ಎಷ್ಟು ಬೀಜ ಬೇಕು ಎಂಬ ಅಂಕಿಅಂಶಗಳನ್ನು ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ್ಗೆ ತಿಳಿಸಬೇಕು ಎಂದು ಹೇಳುತ್ತೇನೆ. ನಮ್ಮ ಪ್ರದೇಶದಲ್ಲಿ ಲಕ್ಷ್ಮೀ ಹತ್ತಿ, ಜವಾರಿ ಹತ್ತಿ ಬೆಳೆಯುತ್ತಾರೆ. ಹತ್ತಿಗೆ ರೋಗ ಬಂದು ರೈತರಿಗೆ ಬಹಳ ನಷ್ಟವಾಗಿದೆ. ರೋಗ ನಿವಾರಣೆಗೆ ತಕ್ಕ ಕ್ರಮ ತೆಗೆದುಕೊಳ್ಳಬೇಕಾಗಿದೆ. ಈ ಪ್ರದೇಶದಲ್ಲಿ ಎಂಥ ಮಣ್ಣು ಇದೆ, ಯಾವ ಬೀಜ ಉಪಯೋಗಿಸಬೇಕು ಎಂಬುದಕ್ಕೆ ಪರಿಶೀಲನೆ ಮಾಡಬೇಕು. ನಮ್ಮ ಶಿರಹಟ್ಟಿ ತಾಲ್ಲೂಕಿನಲ್ಲಿ ಲಕ್ಷ್ಮಿ ಹತ್ತಿ ಬೆಳೆದು ರೈತರು ನಿರ್ಗತಿಕರಾಗುವ ಪರಿಸ್ಥಿತಿ ಬಂದಿದೆ. ಮೊಟ್ಟ ಮೊದಲಿಗೆ ಸರಕಾರವನ್ನು ಕೇಳಿಕೊಳ್ಳುವುದೆಂದರೆ ಪ್ರತಿಯೊಂದು ತಾಲ್ಲೂಕಿನಲ್ಲಿಯು ಮಣ್ಣು ಪರೀಕ್ಷೆಯಾಗಬೇಕು. ಯಾವ ಹತ್ತಿ ಬೆಳೆಯಬೇಕು ಎಂಬುದನ್ನು ತಿಳಿದ ಕೊಳ್ಳಬೇಕು. ಅದಕ್ಕೆ ತಕ್ಕಂತೆ ಬೀಜ ನಾಕಷ್ಟು ಪೂರೈಕೆಯಾಗಬೇಕು. ಹೆನೆಲ್ಟ್ ಕ್ಲಾಜ್ 6 ರಿಂದ ಜನರಿಗೆ ತೊಂದರೆಯಾಗುವುದು. ಇನ್ನು ಮುಂದೆ ರೈತರು ಹತ್ತಿ ಬೆಳೆಯುವುದನ್ನೇ ಬಿಟ್ಟು ಬಿಡಬಹುದು. ಜವಾರಿನಲ್ಲಿ ಶೇಕಡ 20ರಷ್ಟು, 50ರಷ್ಟು ಹತ್ತಿ ಬೆಳೆಯಲೇ ಬೇಕೆಂಬ ಕ್ಲಾಜ್ ಸೇರ್ಪಡೆ ಮಾಡಲು ತಿದ್ದುಪಡಿ ತರಬೇಕಾಗಬಹುದು. ಆದುದರಿಂದ ಇದನ್ನು ಸರಕಾರ ಪರಿಶೀಲನೆ ಮಾಡಬೇಕಾದುದು ಅಗತ್ಯ. ಅದಷ್ಟು ಮಟ್ಟಿಗೆ ಜನರ ಹಿತ ದೃಷ್ಟಿ ಇಟ್ಟುಕೊಳ್ಳಬೇಕು. ರೈತರಿಗೆ ಬೇಕಾಗುವ ಫರ್ಟಿಲೈಜರ್ಸ್ ಕೋ-ಆಪರೇಟಿವ್ ಸೊಸೈಟಿ ಮುಖಾಂತರ ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಅನುಕೂಲವಾಗುತ್ತದೆ. ಈರೀತಿ ಮಾಡಿದರೆ ರಾಷ್ಟ್ರೀಯ ವಿಸ್ತರಣ ಯೋಜನೆ ಉದ್ದೇಶ ಯಶಸ್ವಿಯಾಗುತ್ತದೆಂದು ಹೇಳುತ್ತೇನೆ.

ಹತ್ತಿ ಕಾಳು ಮಿಕ್ಸ್ ಮಾಡುವವರಿಗೆ ಒಂದು ಸಾವಿರ ರೂಪಾಯಿಗಳವರೆಗೂ ಫೈನ್ ಹಾಕಿದ್ದೀರಿ, ಶಿಕ್ಷೆ ಕೂಡ ಮಾಡುತ್ತಾ ಇದ್ದೀರಿ. ದನಕರುಗಳಿಗೆ ಹಾಕುವುದಕ್ಕೆ ವಾರಾವಾಗ ಅದನ್ನು ಮಿಕ್ಸ್ ಮಾಡಿಯೇ ಮಾಡಿರುತ್ತಾನೆ. ಇದರಲ್ಲೇನೋ ಇಂಥಾದ್ದರಲ್ಲೇ ಮಿಕ್ಸ್ ಮಾಡಬೇಕೆಂದು

ಇದೆ, ಆದರೂ ಸಹ ಶಿಕ್ಷೆ ಮತ್ತು ಫೈನ್ ಬಹಳ ಹೆಚ್ಚಿನ ಮಟ್ಟದಲ್ಲಿ ಇದೆ, ಮೊಟ್ಟ ಮೊದಲು ಇದನ್ನು ಇಂಟ್ರೊಡ್ಯೂಸ್ ಮಾಡುವಾಗ ಎಷ್ಟೋ ತೊಂದರೆಗಳು ಬರುತ್ತವೆ, ಅವನ್ನು ನಿವಾರಣೆ ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ.

ಶ್ರೀ ಡಿ. ನಾರಾಯಣ ಗೌಡ.—ಈಗ ಬೊಂಬಾಯಿ ಪ್ರಾಂತದಲ್ಲಿರುವ ಕಾನೂನಿನಲ್ಲೂ ಸಹ ಇದು ಇದೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಇದ್ದರೂ ಕೂಡ ಈ ತೆರನಾದ ಕಟ್ಟುರೆ ಆ ಆಕ್ಟ್‌ನಲ್ಲಿ ಇಲ್ಲ. ಎಲ್ಲೊ ಕೆಲವೊಂದು ಕಡೆ ಇರಬಹುದು. ಆದ್ದರಿಂದ ಆದಷ್ಟುಮಟ್ಟಿಗೆ ಇದನ್ನೆಲ್ಲಾ ಸರಿಪಡಿಸಿ ಬೇಕೆಂದು ಹೇಳುತ್ತೇನೆ. ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಆಫೀಸರ್‌ಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದೇ ಆದರೆ ತೊಂದರೆಗಳು ಬರುತ್ತವೆ. ಅವನ್ನು ನಿವಾರಣೆ ಮಾಡಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ. ಕೊನೆಯದಾಗಿ ಯಾವುದೇ ಆದರೂ ಕೂಡ ಮೊದಲು ರಾಜ್ಯದಾದ್ಯಂತ ಸರ್ವೆಮಾಡಿ ಇದರ ಬಗ್ಗೆ ಉತ್ತೇಜನಾರ್ಥವಾಗಿ ತಿಳಿವಳಿಕೆ ಕೊಟ್ಟಿದ್ದರೆ ಚೆನ್ನಾಗಿತ್ತು ಎಂದು ಹೇಳಿ ಇದರಲ್ಲಿರ ತಕ್ಕ ಕ್ಲಾಸ್‌ಗಳು ಸರಿಯಾಗಿಲ್ಲ. ಇದನ್ನು ಸ್ವಲ್ಪ ವಿಮರ್ಶೆಮಾಡಿ ಮುಂದೆ ಈ ಅಸೆಂಬ್ಲಿಯಲ್ಲಿ ಇಟ್ಟು ಪಾಸ್ ಮಾಡಿಸಬೇಕೆಂದು ಹೇಳುತ್ತೇನೆ.

†ಶ್ರಿ ಪಿ. ಬಿ. ಬೊಮ್ಮಣ್ಣ (ಅರಸೀಕೆರೆ).—ಸ್ವಾಮಿ, ಈ ಕಾಟನ್ ಕಂಟ್ರೋಲ್ ಬಿಲ್‌ನ್ನು ತರುವಾಗ ಇದರ ಉದ್ದೇಶ ಹೇಳಿರುವುದನ್ನು ನೋಡಿದರೆ ಇದನ್ನು ಹತ್ತಿ ಬೆಳೆಗಾರರ ಹಿತದೃಷ್ಟಿಯಿಂದ ಹತ್ತಿ ಬೆಳೆಯನ್ನು ಉತ್ತಮ ಪಡಿಸುವುದಕ್ಕೆ ತರಲಾಗಿದೆ ಎಂದು ಹೇಳುತ್ತಾ ಇದ್ದಾರೆ. ಹತ್ತಿ ಕಂಟ್ರೋಲ್ ಇರತಕ್ಕ ಪ್ರದೇಶದಿಂದ ಬಂದ ನಾನು ನನ್ನ ಅನುಭವದ ಮೇಲೆ ಕೆಲವು ಮಾತುಗಳನ್ನು ಆಡಬೇಕೆಂದು ಇದ್ದೇನೆ. ಹತ್ತಿ ಬೆಳಗಾರರ ಹಿತದೃಷ್ಟಿಯಿಂದ ಅಂತ ಹೇಳಿ ಈ ಬಿಲ್‌ನ್ನು ತಂದಿರುವುದನ್ನು ನೋಡಿದರೆ ನನಗೆ ಏನು ಜ್ಞಾಪಕಕ್ಕೆ ಬರುತ್ತದೆ ಎಂದರೆ ಪೂರ್ವಕಾಲದಲ್ಲಿ ಒಬ್ಬ ರಾಜನಿದ್ದನಂತೆ, ಅವನು ಪುಂಡರಿಗೆ ಶಿಕ್ಷೆಮಾಡುವುದಕ್ಕೆ ಆನೆಯನ್ನು ಬಹುಮಾನವಾಗಿ ಕೊಡುತ್ತಾ ಇದ್ದನಂತೆ. ಆಮೇಲೆ ಇನ್ನೇನು ಹೇಳಬೇಕಾದ್ದೇ ಇಲ್ಲ, ಆನೆ ಕಟ್ಟಿ ಅದನ್ನು ಸಾಕುವುದಕ್ಕೆ ಹೋಗಿ ಅವನ ಮನೆಯೇ ಹಾಳಾಗುತ್ತಾ ಇತ್ತು. ಅಂತಹ ಬಿಲ್ಲು ಇದು ಎಂದು ಕಾಣುತ್ತಾ ಇದೆ. ನಮ್ಮ ರೈತರ ಮೇಲೆ ನಿಮಗೆ ಏನು ದ್ವೇಷ ಇದೆಯೋ ಏನೋ ಏಕೆ ಈ ಬಿಲ್ಲನ್ನು ತರಬೇಕೋ ನನಗೆ ಬಹಳ ಆಶ್ಚರ್ಯವಾಗಿದೆ. 1942ನೇ ಮೈಸೂರು ಕಾಟನ್ ಕಂಟ್ರೋಲ್ ಆಕ್ಟ್‌ನ್ನು ಈಗ ರಿಪೀಲ್‌ಮಾಡಿದ್ದೀರಿ. ಈ ಆಕ್ಟ್ ಮದ್ದೂರು ಪ್ರಾಂತ್ಯದಲ್ಲಿ ಜಾರಿಯಲ್ಲಿತ್ತು, ಹತ್ತಿ ವ್ಯವಸಾಯ ಅಲ್ಲದ್ದು ಅಲ್ಲ ಒಂದು ಪ್ರೈಸ್‌ನ್ನು ಇಟ್ಟುಕೊಂಡಿದ್ದರು. ಅದಕ್ಕೊಸ್ಕರ ಅದನ್ನು ಕಂಟ್ರೋಲ್ ಏರಿಯಾ ಎಂದು ಮಾಡಿದರು ಎಂದು ಕಾಣುತ್ತದೆ. ಕ್ರಮೇಣ ಮದ್ದೂರು ಪ್ರಾಂತ್ಯದಲ್ಲಿ ಹತ್ತಿ ಬೆಳೆಯಾಗದೇ ಕೊನೆಗೆ ಆ ಪ್ರೈಸ್‌ಗೆ ಅಲ್ಲಿ ಕೆಲಸವಿಲ್ಲ ಎಂದು ಹೇಳಿ ಅದನ್ನು ಅರಸೀಕೆರೆಗೆ ಕಳುಹಿಸಿದರು. ಅಂತೂ ಆ ಮಾತು ಇರಲಿ ಈ ಕಂಟ್ರೋಲ್ಡ್ ಏರಿಯಾ ಎಂದು ಮಾಡಿದ್ದೇ ಆದರೆ ಆ ಬೆಳೆ ಬೆಳೆಯತಕ್ಕ ರೈತರ ಮನೆ ಹಾಳಾಗಿ ಹೋಗುತ್ತದೆ. ನಮ್ಮ ರೈತರ ಮೇಲೆ ನಿಮಗೆ ಏನು ದ್ವೇಷ ಇದೆಯೋ, ಅವರು ಏನು ಅಪರಾಧ ಮಾಡಿದ್ದಾರೋ ಗೊತ್ತಿಲ್ಲ. ಆ ದ್ವೇಷವನ್ನು ತೀರಿಸಿಕೊಳ್ಳುವುದಕ್ಕೆ ಈ ತರಹ ಕಾನೂನುಮಾಡಿ ರೈತರನ್ನು ಹಾಳು ಮಾಡಬೇಡಿ, ಬೇರೆ ರೀತಿಯಲ್ಲಿ ಶಿಕ್ಷೆಕೊಡಿ ಎಂದು ಹೇಳುತ್ತೇನೆ.

ಇದರಲ್ಲಿ ಸೀಡ್ಲಿಂಗ್ ಎನ್ನುವುದು 50ಕ್ಕಿಂತ ಜಾಸ್ತಿ ಶಬ್ದಗಳು ಇವೆ, ಕಾಟನ್ ಸೀಡ್ಲಿಂಗ್ ಅಂತ ಅನ್ನುವುದನ್ನು ಕೇಳಿರುವುದು ಇದೇ ಮೊದಲನೆಯ ಸಾರಿ. ಸ್ವಂತವಾಗಿ ಸೀಡ್ಲಿಂಗ್ ಮಾಡಿ ಒಳ್ಳೆಯ ವ್ಯವಸಾಯ ಮಾಡಬೇಕೆಂದು ಇದ್ದೀರಿ ಎಂದು ಕಾಣುತ್ತದೆ. ಸೀಡ್ಲಿಂಗ್ ಪರೀಕ್ಷೆ ಮಾಡಿ ಹಾಕುವುದು ಅಗತ್ಯವಾಗಿದ್ದರೆ ಅದನ್ನು ಹೇಳಿಕೊಡುವುದು ಒಳ್ಳೆಯದು ಎಂದು ಸಲಹೆ ಮಾಡುತ್ತೇನೆ.

ಕ್ಲಾಸ್ 4ರಲ್ಲಿ ಹೇಳಿರುವಂತೆ ಇಂಥಾ ಬೀಜವನ್ನೇ ಹಾಕಬೇಕೆಂದು ಅವರು ಆರ್ಡರ್ ಮಾಡಿದ ಮೇಲೆ ಅದನ್ನು ಬದಲಾಯಿಸುವುದಕ್ಕೆ ಆಗುವುದಿಲ್ಲ. ಒಂದು ಸಾರಿ ಹಾಕಿದ್ದೇವೆ ಅದು ಅಷ್ಟು ಚೆನ್ನಾಗಿ ಬರುವುದಿಲ್ಲ ಎಂದು ಯಾರಾದರೂ ಹೇಳಿದರೆ, ಅದನ್ನು ಮನಸ್ಸಿಗೆ ಹಾಕಿಕೊಳ್ಳದಿದ್ದ ಪಕ್ಷದಲ್ಲಿ ಅನಾನುಕೂಲವಾಗುತ್ತದೆ.

ಕ್ಲಾಸ್ 5ರಲ್ಲಿ ಫ್ಯಾಕ್ಟರಿಯವರಿಗೆ ಮಾತ್ರ ಮಿಕ್ಸ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಇದಕ್ಕೆ ಸಂಬಂಧಪಟ್ಟ ಅಧಿಕಾರಿ ಎಷ್ಟು ಬೇಕಾದರೂ ಮಿಕ್ಸ್ ಮಾಡುವುದಕ್ಕೆ ಅವಕಾಶ ಕೊಡಬಹುದು. ಇದರಿಂದ ಅವರು ಲಕ್ಷಾಂತರ ರೂಪಾಯಿ ಸಂಪಾದನೆ ಮಾಡುತ್ತಾರೆ ಮತ್ತು ತಮಗೆ ಸಹಾಯ ಮಾಡಿದ ಅಧಿಕಾರಿಗೂ ಕೂಡ ಅದಕ್ಕೆ ಪ್ರತಿಫಲವಾಗಿ ಏನಾದರೂ ಕೊಡಬೇಕು ಎಂದು ಅವರಿಗೂ ಅನಿಸುತ್ತದೆ, ಕೇಳಬೇಕೆಂದು ಅಧಿಕಾರಿಗಳಿಗೂ ಅನಿಸುತ್ತದೆ. ಆದ್ದರಿಂದ ಈ ತರಹ ಮಿಕ್ಸ್ ಮಾಡತಕ್ಕ ಪರ್ಮಿಷನ್ ಕೊಡುವ ಅಧಿಕಾರವನ್ನು ತಾವೇ ಇಟ್ಟುಕೊಳ್ಳುವುದು ಬಹಳ ತಪ್ಪಾಗುತ್ತದೆ.

(ಶ್ರೀ ಪಿ. ಬಿ. ಬೊವ್ಮಣ್ಣ)

ಹೆನಾಲ್ಟ್ ಕ್ಲಾಸ್‌ನಲ್ಲಿ ಒಂದು ಉಪಕಾರ ಮಾಡಿದ್ದೀರಿ, ಮೊದಲನೇ ಸಾರಿಗೆ 20 ರೂಪಾಯಿ, ಎರಡನೆಯ ಸಾರಿ ಅಥವಾ ಎಷ್ಟೇ ಸಾರಿ ಆದರೂ ಕೂಡ 50 ರೂಪಾಯಿ ಎಂದು ಹೇಳಿ ಒಂದು ಅನುಕೂಲ ಮಾಡಿದ್ದೀರಿ. ಇದು ಒಂದಾದರೂ ರೈತರಿಗೆ ಉಪಕಾರವಾಗುತ್ತದೆ ಎಂದು ಹೇಳುತ್ತೇನೆ.

ಕಾಂಪೌಂಡಿಂಗ್‌ನಲ್ಲಿ ಬಹಳ ಸ್ವಾರಸ್ಯವಾಗಿದೆ. ಎಷ್ಟು ರೂಪಾಯಿ ಕೊಡಬೇಕೆಂದು ಹೇಳುತ್ತಾರೋ ಅಷ್ಟು ರೂಪಾಯಿ ಕೊಟ್ಟ ಪಕ್ಷದಲ್ಲಿ ವಾಪಸು ತೆಗೆದುಕೊಳ್ಳಬಹುದು ಎಂದು ಇದೆ. ಇದು ಎಷ್ಟು ರೂಪಾಯಿ ಎಂಬುದು ಯಾರಿಗೂ ಗೊತ್ತಿರುವುದಿಲ್ಲ. ಆದ್ದರಿಂದ ಇದರಿಂದ ಅನ್ಯಾಯವಾಗುವುದರಲ್ಲಿ ಅನುಮಾನವಿಲ್ಲ.

ಕ್ಲಾಸ್ 10 (4)ರಲ್ಲಿ ಹೇಳಿರುವಂತೆ ಮಾತುವುದು ಕಷ್ಟವಾಗುತ್ತದೆ. ಅದನ್ನು ಕಂಡು ಹಿಡಿಯುವುದಕ್ಕೆ ಆಗುವುದಿಲ್ಲ. ಸೀಡ್ಲಿಂಗ್ ಎನ್ನುವುದನ್ನು ಕಂಡು ಹಿಡಿಯುವುದು ಕಷ್ಟ ಎಂದು ಕಾಣುತ್ತದೆ. "Protection for Acts done in good faith" ವಿಚಾರವಾಗಿ ಹೇಳಿದ್ದಾರೆ. ಇದರಲ್ಲಿ ಯಾವ ಒಂದು ದುರುದ್ದೇಶವೂ ಇಲ್ಲದೆ ಯಾವುದಾದರೂ ತಪ್ಪನ್ನು ಮಾಡಿದ್ದಲ್ಲಿ ಅಂಥವರ ಬಗ್ಗೆ ಕ್ರಮ ಕೈಗೊಳ್ಳಲು ಅವಕಾಶವಿಲ್ಲ ಎಂದು ಹೇಳಿರುತ್ತದೆ. ಇದನ್ನು ವಿಚಾರಣೆ ಮಾಡುವುದಕ್ಕೂ ಕೂಡ ಅವಕಾಶ ಮಾಡಿಲ್ಲ. ಅವರೇನು ಅನ್ಯಾಯ ಮಾಡಿದರೂ ಅವರನ್ನು ಕೇಳತಕ್ಕವರೇ ಇಲ್ಲ. ಸಾಲದ ಕೈ ಇದರಲ್ಲಿ ಶ್ಯೆನಾನಷಿಯಲ್ ಮೆಜಿಸ್ಟ್ರೇಟ್ಸ್‌ಗಳಂಥ ಬೇರೆ ಇಲ್ಲ. ಇದಕ್ಕೆಲ್ಲ ಸರ್ಕಾರದವರು ದುಡ್ಡನ್ನು ಎಷ್ಟಂದ ತಂದು ಖರ್ಚುಮಾಡುತ್ತಾರೆಂಬುದನ್ನು ತಿಳಿಸಬೇಕು. ಈ ಬಿಲ್ಲನ್ನಲ್ಲ ಹೇಳಿರುವಂಥ ಒಳ್ಳೆಯ ಕೆಲಸಗಳು ನಡೆಯಬೇಕಾಗಿದ್ದರೆ ಸಧ್ಯಕ್ಕೆ ಇದು ಸಾಧ್ಯವಿಲ್ಲ. ಕಾರಣವೇನೆಂದರೆ ಇಲ್ಲಿ ಆಡಳಿತದಲ್ಲಿ ಅಂಥಾ ದಕ್ಷತೆಯಿಲ್ಲ. ಅಧಿಕಾರಿಗಳಲ್ಲಿ ಸೇವಾ ಮನೋಭಾವನೆ ಇಲ್ಲ. ಈ ಎರಡೂ ಮಾಪಾರ್ಟಾಗುವತನಕ ಇದನ್ನು ಜಾರಿಗೆ ತರಬಾರದೆಂದು ಹೇಳ ತ್ತೇನೆ ! ತಂದಲ್ಲಿ ಇದರಿಂದ ಒಳ್ಳೆಯದಾಗುವುದಕ್ಕೆ ಬದಲಾಗಿ ರೈತರುಗಳಿಗೆ ತೊಂದರೆ ಜಾಸ್ತಿಯಾಗುತ್ತದೆ. ಇದರಿಂದ ಕೆಲವು ಪ್ರದೇಶದಲ್ಲಂತೂ ಜನಗಳಿಗೆ ತೊಂದರೆಯಾಗುತ್ತದೆ. ಆದಕಾರಣ ನಾನಾಗಲೇ ಹೇಳಿದ ಸಲಹೆಗಳನ್ನು ಜಾರಿಗೆ ತರುವವರೆಗೆ ಈ ಬಿಲ್ಲನ್ನು ಮಾನ್ಯ ಮಂತ್ರಿಗಳು ದಯವಿಟ್ಟು ವಾಪಸ್ಸು ತೆಗೆದು ಕೊಳ್ಳಬೇಕೆಂದು ಹೇಳಿ ನನಗೆ ಈ ನಾಲ್ಕು ಮಾತುಗಳನ್ನಾಡುವುದಕ್ಕೆ ಅವಕಾಶಮಾಡಿಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಆರ್. ಪಾಟೀಲ್ (ಹುಬ್ಳಿ) ಸ್ಪೀಕರ್ ಅಧ್ಯಕ್ಷರೇ, ನಮ್ಮ ಮುಂದೆ ಈಗ ಡೆರ್ಜಿಗೆ ಬಂದಿರತಕ್ಕ ಬಿಲ್ಲನ್ನು ನಾನು ಸ್ವಾಗತಿಸುತ್ತೇನೆ. ಆದರೆ ನಾನು ಇದನ್ನು ಬಹಳ ವಿಷಾದದಿಂದ ಸ್ವಾಗತಿಸುತ್ತೇನೆ. ಈಗ ಈ ಬಿಲ್ಲು ಬರುತ್ತಿದೆ. ಇದಕ್ಕೂ ಹಿಂದೆ ನಮ್ಮಲ್ಲಿ 1942 ರಿಂದಲೂ ಒಂದು ಆಕ್ಟ್ ಜಾರಿಯಲ್ಲಿತ್ತು. ಆದರ ಬಗ್ಗೆ ಸರ್ಕಾರದವರು ಒಂದು ಹೆಜ್ಜೆ ಮುನ್ನಾದರೂ ಮುಂದೆ ಹೋಗಿಲ್ಲ. ಆದರೆ ಇನ್ನು ಮುಂದೆ ರೈತ ಯಾವ ಭೂಮಿಯಲ್ಲಿ ಯಾವ ಹತ್ತಿಯನ್ನು ಬಿತ್ತಬೇಕು ಯಾವ ಕಾಲಕ್ಕೆ ಯಾವ ಹತ್ತಿಯನ್ನು ಬಿತ್ತಬೇಕು ಎನ್ನತಕ್ಕ ವಿಚಾರದಲ್ಲಿ ಸರ್ಕಾರದವರೇನು ನಿರ್ಣಯ ಮಾಡುತ್ತಾರೆ ಅದರಂತೆ ಅತನು ನಡೆದುಕೊಳ್ಳಬೇಕಾಗಿರುತ್ತದೆ. ಈ ವಿಚಾರದಲ್ಲಿ ಒಂದು ಬಿಲ್ಲನ್ನೇನೋ ಸರ್ಕಾರದವರು ಈಗ ಮಾಡಿದ್ದಾರೆ. ಇನ್ನು ಮುಂದೆ ಸರ್ಕಾರದವರು ಯಾವ ಸರಹದ್ದಿಗೇನು ಬೀಜ ಕೊಡುತ್ತಾರೆ ಅದನ್ನೇ ರೈತ ಬಿತ್ತಬೇಕು. ಆದರೆ ಹೀಗೆ ಸರ್ಕಾರದವರು ನಾಳೆ ಕೊಡತಕ್ಕ ಬೀಜ ಬಹಳ ಉತ್ತಮವಾದದ್ದು, ಉತ್ತಮ ಬೆಳೆ ಕೊಡುವಂಥಾದ್ದು ಅಲ್ಲಯ ಹವಾಮಾನಕ್ಕೆ ಸರಿಹೊಂದಿಕೊಳ್ಳುವಂಥಾದ್ದು, ಬಿತ್ತತಕ್ಕ ಜಮೀನಿಗೆ ಬಹಳ ಅನುಕೂಲವಾದಂಥಾದ್ದು ಎಂಬುದನ್ನೆಲ್ಲಾ ಮೊದಲು ಖಾತ್ರಿ ಮಾಡಿಕೊಂಡು ಕೊಡಬೇಕೆಂದು ಇದರಲ್ಲಿ ಒಂದು ವಿಧಾಯಕವನ್ನು ಮಾಡಿಬಿಟ್ಟಿದ್ದಾರೆ. ಆದರೆ ಇದರಿಂದ ಏನಾಗುತ್ತದೆ ಎಂದರೆ : ಈಗ ಸರ್ಕಾರದವರು ಕೊಡತಕ್ಕ ಹತ್ತೀ ಬೀಜ ಒಂದು ವೇನಾ ಉಳಿದ ಹತ್ತಿ ಬೀಜಗಳೇನಿವೆ ಅವುಗಳೆಲ್ಲಾ ನಾಶವಾಗಿ ಹೋಗುತ್ತವೆ. ನಮ್ಮ ಮೈಸೂರಿನಲ್ಲಿ ಈ ಸರ್ಕಾರಿ ಹತ್ತಿ ಬೀಜ ವೇನಾ ಬೇರೆಯಾವ ಹತ್ತಿ ಬೀಜವೂ ದೊರೆಯುವುದಿಲ್ಲ, ಇಲ್ಲಿಯವರೆಗೆ ಜಾರಿಯಲ್ಲಿದ್ದ ಹತ್ತೀ ಬೀಜಗಳೆಲ್ಲಾ ನಮ್ಮ ದೇಶವನ್ನು ಬಿಟ್ಟು ಹೊರಗೆ ಹೋಗಿಬಿಡುತ್ತವೆ. ಆದರೆ ಇದರಿಂದ ಸರ್ಕಾರದವರ ಮೇಲೆ ಬಹಳ ಜವಾಬ್ದಾರಿ ಬೀಳುತ್ತದೆ. ರೈತರಿಗೆ ಮುಂದೆ ಇದರಿಂದ ಕೆಟ್ಟ ಪರಿಣಾಮಗಳೂ ಆಗುತ್ತವೆ. ಆದರೆ ಇಲ್ಲಿಯತನಕ ಸರ್ಕಾರದವರು ತಮ್ಮ ಹೊಣೆಗಾರಿಕೆಯನ್ನು ಎಷ್ಟರ ಮಟ್ಟಿಗೆ ನಿರ್ವಹಿಸಿದ್ದಾರೆಂಬುದನ್ನು ನಾವು ಸ್ವಲ್ಪ ಪರಿಶೀಲನೆ ಮಾಡಿ ನೋಡಬೇಕಾಗಿದೆ. ಇದರ ಸಂಪೂರ್ಣ ಹೊಣೆಗಾರಿಕೆಯನ್ನು ಸರ್ಕಾರದವರು ಹೊರುವುದಾದರೆ ಚಿಂತೆಯಿಲ್ಲ. ಇಲ್ಲವಾದರೆ ಜನಗಳಿಂದ ಬಹಳ ದೂಷಣೆಗಳನ್ನು ಸರ್ಕಾರದವರು ಹೊರಬೇಕಾಗುತ್ತದೆ. ಆದರೆ ಈ ದಿವನ ಆ ಕಾಟನ್ ಕಂಟ್ರೋಲ್ ಆರ್ಡರ್ ಪ್ರಕಾರ ಏನು ನಡೆದಿದೆ, ಕೆಲಸಗಳು

ಯಾವ ಪ್ರಕಾರ ಆಗಿವೆ, ಅಧಿಕಾರಿಗಳು ಈ ವಿಚಾರದಲ್ಲಿ ಎಷ್ಟರಮಟ್ಟಿಗೆ ಲಕ್ಷ್ಯ ಕೊಟ್ಟಿದ್ದಾರೆ ಎಂಬ ಬಗ್ಗೆ ನಾನೀಗ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ.

Mr. DEPUTY SPEAKER.—This Bill only seeks to control the growing of cotton.

Sri M. R. PATIL.—Yes, clause 5 says that the cultivator must grow that particular variety fixed by the Government. Under the scheme, there is no seed available except that which is supplied by the Government. That is the position. Now the State has taken the responsibility of supplying seed all these years. That is the position. That is why I am stressing this point. Before that, the cultivator could have grown any seed he liked. Now after the coming into force of this Bill, the seed that is supplied by the Government has to be grown by the cultivator.

ಇದರಿಂದ ಹತ್ತಿ ಬೆಳೆಯುವ ರೈತನ ಸ್ಥಿತಿ ಮುಂದೆ ಬಹಳ ಶೋಚನೀಯವಾಗುವುದು. ಹತ್ತಿ ಬೆಳೆಯತಕ್ಕ ಪ್ರದೇಶಗಳು ಯಾವುವೆಂಬುದನ್ನು ಇನ್ನೂ ನಿಗದಿ ಮಾಡಿಲ್ಲ. ಇದನ್ನು ಮಾಡಿದ ಮೇಲೆ ಮುಂದೇನಾಗುತ್ತದೆ ಎಂಬುದನ್ನು ಹೇಳುತ್ತೇನೆ. ನಮ್ಮ ಪ್ರಾಂತದಲ್ಲಿ ಹತ್ತಿ ಬೆಳೆಯತಕ್ಕ ಜಮೀನು ಸುಮಾರು 28 ಲಕ್ಷ ಎಕರೆಗಳಿವೆ. ಮುಂಬೈ ಕರ್ನಾಟಕದ ಭೂ ವಿಸ್ತೀರ್ಣದಲ್ಲಿ ನಾಲ್ಕನೇ ಒಂದು ಭಾಗ ಹತ್ತಿ ಬೆಳೆಯತಕ್ಕ ಜಮೀನಿದೆ. ಅಂದರೆ ಧಾರ್ವಾಡಾ ಜಿಲ್ಲೆಯಲ್ಲಿ ಈ ಭೂಮಿ ಜಾಸ್ತಿ ಇದೆ. ನಾನು ಧಾರ್ವಾಡ ಜಿಲ್ಲೆಯಿಂದ ಶರತ್ಕಾಲವನಾಗಿದ್ದೇನೆ. ನಾನು ಈ ಹತ್ತಿ ಬೆಳೆಯ ವಿಚಾರದಲ್ಲಿ ತೇಲಿ ಮುಳುಗಿದವನಾಗಿದ್ದೇನೆ. ನನಗೂ ಈ ವಿಚಾರದಲ್ಲಿ ಸ್ವಲ್ಪ ಅನುಭವ ಇದೆ ಎಂಬುದನ್ನು ಹೇಳಬಯಸುತ್ತೇನೆ. ನಮ್ಮ ಸರ್ಕಾರದವರು ಈ ಹತ್ತಿ ಬೆಳೆಗೆ ಯಾವ ರೀತಿ ಪ್ರೋತ್ಸಾಹ ನೀಡಿದ್ದಾರೆಂಬುದನ್ನು ತಿಳಿಸಲಪೇಕ್ಷಿಸುತ್ತೇನೆ. ಹತ್ತಿ ಬೀಜದ ಸರಬರಾಯಿಗೆ ನಮ್ಮ ಹತ್ತಿರ ಒಂದು ದೊಡ್ಡ ಕೇಂದ್ರ. ರೈತರು ಸುಮಾರು ಕಳೆದ 10 ವರ್ಷಗಳಿಂದ ಜಯಧರ ಹತ್ತಿಯನ್ನು ಬೆಳೆಯುತ್ತಿದ್ದರು. ಆದರೆ ಇತ್ತೀಚೆಗೆ ಇದರ ಆಕರ್ಷಣೆ ಹೋಗಿಬಿಟ್ಟಿದೆ. ಹಿಂದೆ ಇದು ವರ್ಷಕ್ಕೆ 3 ಸಾವಿರ ಚೀಲಕ್ಕೆ ಕಡಮೆಯಿಲ್ಲದೆ ಖರ್ಚಾಗುತ್ತಿತ್ತು. ಆದರೆ ಈ ವರ್ಷ ಕೇವಲ 800 ಚೀಲ ಮಾತ್ರ ಖರ್ಚಾಗಿದೆ. ರೈತರು ಹಿಂದೆ ಹತ್ತಿ ಬೆಳೆಯುತ್ತಿದ್ದಂಥ ಜಮೀನಿನಲ್ಲಿ ಈಗ ಶೇಂಗಾ, ಮೆಣಸಿನಕಾಯಿ, ಈರುಳ್ಳಿ ಇತ್ಯಾದಿ ಪೀಕುಗಳನ್ನು ಬೆಳೆಯಲಕ್ಕೆ ಹತ್ತಿದ್ದಾರೆ. ಈ ಜಯಧರ ಹತ್ತಿಯ ಸ್ಥಾನಾನ್ಯ ಈಗ ಕಳೆದು ಹೋಗಿದೆ. ಇವನ್ನು ಜನ ನೆಗ್ಲೆಕ್ಟ್ ಮಾಡಲಕ್ಕೆ ಹತ್ತಿದ್ದಾರೆ. ಇದರ ಬಗ್ಗೆ ಇಲ್ಲಿಯವರೆಗೆ ಶಾಸ್ತ್ರೀಯವಾಗಿ ಯಾವ ಒಂದು ರಿಸರ್ಚ್ ಕೂಡ ನಡೆದಿಲ್ಲ. ಇದು ಈಗ ಸಂಪೂರ್ಣವಾಗಿ ನಾಶವಾಗುವ ಕಾಲ ಬಂದಿದೆ. ನನ್ನ ಮುಂಬೈ ರಾಜ್ಯದ 15-20 ವರ್ಷಗಳ ಅನುಭವದಲ್ಲಿ ಈ ಅಗ್ರಿಕಲ್‌ಚರಲ್ ಇಲಾಖೆಯುವರಿಂದ ಈ ಬೆಳೆಗೆ ಎಷ್ಟರಮಟ್ಟಿಗೆ ಪುರಸ್ಕಾರ ಸಿಕ್ಕಿದೆ ಎಂಬುದನ್ನು ಹೇಳಲಿಕ್ಕೆ ಸಾಧ್ಯವಿಲ್ಲ. ಆ ಇಲಾಖೆಯಲ್ಲಿದ್ದ ಒಬ್ಬ ಪರಿಣತರು ಕೇಂದ್ರ ಸರ್ಕಾರಕ್ಕೆ ಹೋದರು. ಇದ್ದ ಇನ್ನೊಬ್ಬರು ರಿಸರ್ಚ್ ಬೋರ್ಡಿನಲ್ಲಿ ಸೇರಿಬಿಟ್ಟರು. ಹೀಗಾಗಿ ಈ ದಿವಸ ಈ ಇಲಾಖೆಯಲ್ಲಿ ಕೇವಲ ಹುಡುಗರುಗಳು ಮಾತ್ರ ಇದ್ದಾರೆ. ಪೂರ್ಣಾನುಭವ ಬರುವವರೆಗೂ ಅವರನ್ನು ಒಂದು ಕಡೆ ಇಡುತ್ತಾರೆಯೇ ಎಂದರೆ ಅದನ್ನೂ ಸಹಾ ಮಾಡುತ್ತಿಲ್ಲ. ಅವರನ್ನು 6 ತಿಂಗಳಿಗೊಂದಾವರ್ತಿ ಊರಿಂದೂರಿಗೆ ವರ್ಗ ಮಾಡುತ್ತಿದ್ದಾರೆ. ಹೀಗಾದರೆ ಅವರೆನು ಕಲಿಯುತ್ತಾರೆ ? ಹೀಗೆಲ್ಲಾ ಆಗಿ ಯಾವ ಭೂಮಿಗೆ ಯಾವ ಬೀಜ ಹಾಕಬೇಕು, ಯಾವ ಹವಾಗುಣಕ್ಕೆ ಯಾವ ಬೀಜ ಹಾಕಬೇಕು ಎಂಬುದನ್ನು ಇಲಾಖೆಯವರು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದ್ದಾರೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ ಇದರಿಂದ ರೈತರಿಗೆ ಬಹಳ ಅನ್ಯಾಯವಾಗಿದೆ.

3-30 P.M.

ಇನ್ನು ನಿಮ್ಮಲ್ಲಿರುವ ಹತ್ತಿ ರೀಸರ್ಚ್ ಸ್ಕೀಮುಗಳ ಕಡೆಗೆ ಸಂಪೂರ್ಣಲಕ್ಷ ಕೊಡಬೇಕು. ಇವೊತ್ತಿನ ದಿನ ನಮ್ಮ ಕಡೆಗೆ ಜಯಧರ ಹಾಗೂ ಲಕ್ಷ್ಮಿ ಹತ್ತಿ ಬೀಜಗಳು ಎಂದು ಏನು ಹಂಚುತ್ತಿದ್ದಾರೆ ಅವುಗಳಿಂದ ರೈತರಿಗೆ ಏನೂ ಪ್ರಯೋಜನವಾಗದೆ ಕೆಟ್ಟು ಹಾಳಾಗುತ್ತಿವೆ. ಅಲ್ಲವೆ ಸುಯಾದ ಹತ್ತಿ ರೀಸರ್ಚ್ ಬೀಜಗಳೆಂದು ಮಾತ್ರ ಅದರಿಂದ ಸಂಪೂರ್ಣ ಫಲ ದೊರೆಯುವಂತೆ ಇಲ್ಲಿರುವ ಅಧಿಕಾರಿಗಳು ಪರಿಶೋಧಿಸಲು ಪ್ರಯತ್ನ ಮಾಡಿಲ್ಲ. ಇಲ್ಲಿರುವ ಮೂರು ಅಧಿಕಾರಿಗಳಿಗೆ ಅದರ ಪರಿಶ್ರಮ ಕೂಡ ಚೆನ್ನಾಗಿ ಗೊತ್ತಿಲ್ಲ. ಇದರಿಂದ ಹತ್ತಿ ಬೆಳೆ ನ ಧಾರಿಸುವಂತಿಲ್ಲ ಈಗ ಧಾರವಾಡದಲ್ಲಿ ಒಂದು ರೀಸರ್ಚ್ ಸ್ಕೀಮನ್ನು ಹಾಗೂ ಅಣ್ಣಿಗೇರಿಯಲ್ಲಿರುವ ರೀಸರ್ಚ್ ಸ್ಕೀಮುಗಳಲ್ಲಿ ಕಾಪ್ಪಪಕ್ಷ ನಿಮ್ಮ ಇಲಾಖೆಯಲ್ಲಿರುವ ಅರೆಂಟು ಜನ ಅಧಿಕಾರಿಗಳನ್ನು ತರಬೇತಿ ಕೊಟ್ಟು ಅದರಿಂದ ಹತ್ತಿಯ

(SRI M. R. PATIL)

ಬೀಜಗಳನ್ನು ಸಂಶೋಧನೆ ಮಾಡಲಕ್ಕೆ ಪ್ರಯತ್ನ ಮಾಡಬೇಕು. ಈಗಿರುವ ರೀಸರ್ಚು ಸ್ಟೇಷನ್ನಿನಲ್ಲಿ ಒಬ್ಬರು ಸೂಪರಿಂಟೆಂಡರು, ಒಬ್ಬರು ಕಾಟನ್ ಡಿಸ್ಟ್ರಿಬ್ಯೂಟಿಂಗ್ ಆಫೀಸರು ಮತ್ತು ಇನ್ನು ಕೆಲವು ಅಧಿಕಾರಿಗಳಿಗೆ ವರ್ಷದ ಮೊದಲಿಗೆ ಅರು ತಿಂಗಳು ಕೆಲಸವೇ ಇರುವುದಿಲ್ಲ. ಕಾಟನ್‌ಸೂಪರಿಂಟೆಂಡೆಂಟ ಆಫೀಸಿನೊಳಗೆ ದೊಡ್ಡ ದೊಡ್ಡ ಪಗಾರ ಹಿಡಿದು ಕೊಂಡು ಇರುವ ಅಧಿಕಾರಿಗಳು ಧಾರವಾಡದ ರೀಸರ್ಚು ಸ್ಟೇಷನ್ನಿನಲ್ಲಿ ಇದ್ದಾರೆ. ಇದರಲ್ಲಿರುವ ಒಬ್ಬ ಗೆಜೆಟೆಡು ಅಧಿಕಾರಿಗಳ ಕೈಕೆಳಗೆ ಇರುವಂತಹ ಅಧಿಕಾರಿಗಳನ್ನು ಒಂದೆರಡು ತಿಂಗಳ ಕಾಲ ಕಡ್ಡಾಯವಾಗಿ ರೀಸರ್ಚು ಕೆಲಸವನ್ನು ಮಾಡ ಬೇಕೆಂದು ಒತ್ತಾಯ ಹೇಳಿ ಅಂತಹವರು ತರಬೇತಿ ಪಡೆದರೆ ಉತ್ತಮ ಪಡಿಸಬಹುದು. ಆದರೆ ಈಗ ನಿಮ್ಮ ರೀಸರ್ಚು ಸ್ಟೇಷನ್ನಿನಲ್ಲಿ ಕೆಲಸ ಮಾಡಲು ಬರುತ್ತಿರುವವರು ಅನುಭವವಿಲ್ಲದವರು. ಇಂತಹ ವರಿಂದ ರೀಸರ್ಚು ಕೆಲಸ ಮಾಡಿಸುವುದರಿಂದ ಅದು ನಾಶವಾಗಿ ಉತ್ತಮ ಫಲ ರೈತರಿಗೆ ಸಿಕ್ಕುತ್ತಿಲ್ಲ. ಅದರಲ್ಲೂ ನಿಮ್ಮ ಇಲಾಖೆಯಲ್ಲಿ ಮಾಡುವ ವರ್ಗಾವರ್ಗಿಗಳಿಂದಾಗಿ 3—4 ತಿಂಗಳುಗಳ ಕಾಲವಾದರೂ ಈ ಧಾರವಾಡದ ರೀಸರ್ಚು ಸ್ಟೇಷನ್ನಿನಲ್ಲಿ ಉಳಿಯುವಂತಿಲ್ಲ, ಹೀಗಾದರೆ ಕಾಟನ್ ರೀಸರ್ಚನ್ನು ಮಾಡುವುದಕ್ಕೆ ಹೇಗೆ ಸಾಧ್ಯ ಎಂದು ನಾನು ಸರಕಾರದಲ್ಲಿ ವಿನಂತಿ ಮಾಡುತ್ತಿದ್ದೇನೆ. ಅಲ್ಲದೇ ಈ ಕಾಟನ್ ರೀಸರ್ಚು ಸ್ಟೇಷನ್ನಿಗೆ ಹೊಸದಾಗಿ ಗ್ರ್ಯಾಜುಯೇಟುಗಳಾಗಿ ಬರುವವರನ್ನು ಕಡ್ಡಾಯ ವಾಗಿ ಆರಾರು ತಿಂಗಳ ಕಾಲ ರೀಸರ್ಚು ಸ್ಟೇಷನ್ನುಗಳಲ್ಲಿ ಟ್ರೇನಿಂಗನ್ನು ಪಡೆಯುವಂತೆ ಮಾಡಬೇಕು. ಒತ್ತಾಯ ದಿಂದ ಈ ರೀತಿ ಮಾಡಿದರೆ ಕನಿಷ್ಟಪಕ್ಷ ಒಂದು ವರ್ಷದಲ್ಲಿ ತರಬೇತಿ ಪಡೆದ ನುಮಾರು 20—25 ಅಧಿಕಾರಿಗಳನ್ನು ಪಡೆಯಲು ಅನುಕೂಲವಾಗುತ್ತದೆ.

ಇನ್ನೊಂದು ವಿಚಾರ ಇಲ್ಲಿ ಹೇಳ ಬೇಕಾಗಿದೆ. ನೀವೀಗ ಜಯಧರ ಹಾಗೂ ಲಕ್ಷ್ಮಿ ಹತ್ತಿ ಬೀಜ ಗಳೆಂದು ಏನು ಬೆಳೆಯುತಿದ್ದೀರಿ ಇದನ್ನು ತೆಗೆದುಕೊಂಡು ತಮ್ಮ ಭಾಗದ ಯಾವ ಊರಿನಲ್ಲಾದರೂ ಸರಿಯೇ, ಅಲ್ಲರುವ ವ್ಯಾಪಾರಸ್ಥರನ್ನೂ ಮತ್ತು ಹಳ್ಳಿಯ ಜನರನ್ನು ಕೇಳಿ ಇದರ ಬಗ್ಗೆ ಅವರಿಗಿರುವ ಅಭಿಪ್ರಾಯ ತಿಳಿದುಕೊಳ್ಳಿ. ಇದಕ್ಕೆ ಅಲ್ಲರುವ ನಿಮ್ಮ ಅಧಿಕಾರಿಗಳಿಂದ ಬರುವ ವರದಿಗಳನ್ನು ನಂಬ ಬೇಡಿ. ಜನರ ಅಭಿಪ್ರಾಯವನ್ನು ಕೇಳಿದಾಗ ಇದರ ಉತ್ಪನ್ನ ಅರ್ಧದಷ್ಟೂ ಬರುವುದಿಲ್ಲ ಎನ್ನುವುದು ನಿಮಗೆ ಗೊತ್ತಾಗುತ್ತದೆ. ಈಗ ನೀವು ಹಂಚುವ ಬೀಜಗಳು ಸರಿಯಾದ ಬೆಳೆಯನ್ನು ಕೊಡುವ ಶಕ್ತಿ ಇಲ್ಲ. ಹಾಗೆ ಈ ಬೀಜಗಳಿಂದ ಒಳ್ಳೆಯ ಬೆಳೆ ಬಾರದೆ ಹೋದರೆ ಜನಕ್ಕೇನು ಸಹಾಯ ಮಾಡಿದಂತಾ ಗುತ್ತದೆ. ಇವೊತ್ತಿನ ಕಾಲಕ್ಕೆ ಸರಿಯಾದ ರೆಸಿಸ್ಟೆಂಟು ಆಗಿರುವಂತಹ ಬಲವುಳ್ಳ ಹತ್ತಿ ಬೀಜವನ್ನು ಕೊಟ್ಟು ಉತ್ತಮ ಹತ್ತಿ ಬೆಳೆಯನ್ನು ಮಾಡುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಸರಕಾರ ತೆಗೆದು ಕೊಳ್ಳಬೇಕು. ಇದರ ಕಡೆಗೆ ಇಲ್ಲಿನ ಅಧಿಕಾರಿಗಳು ತಕ್ಕ ಪ್ರಯತ್ನ ಮಾಡುತ್ತಿಲ್ಲ ಮತ್ತು ಹೊಸ ತರಹದ ಬೀಜಗಳನ್ನೂ ಕಂಡು ಹಿಡಿಯುವುದಕ್ಕೂ ಹೋಗುತ್ತಿಲ್ಲ. ಹೊಸ ಬೀಜಗಳನ್ನು ಸಂಶೋಧಿ ಸಲು ತಕ್ಕ ಪ್ರಯತ್ನ ಮಾಡಬೇಕು. ನಿಮ್ಮ ಅಧಿಕಾರಿಗಳ ಹೇಳಿಕೆಯನ್ನು ಕೇಳಿಕೊಂಡು ಈಗ ಹೊಸ ನಮೂನೆಯ ಹತ್ತಿ ಬೀಜಗಳನ್ನು ಹಂಚಿದರ ಫಲವಾಗಿ ಹೋದ ವರ್ಷ ನಮ್ಮ ಭಾಗದಲ್ಲಿ 3000 ಚೀಲ ಗಳಷ್ಟು ಹತ್ತಿ ಬೆಳೆಯಾದದ್ದು ಈ ವರ್ಷ ಕೇವಲ 800 ಚೀಲಗಳಷ್ಟು ಮಾತ್ರ ಬೆಳೆಯಾಗಲು ಅವಕಾಶ ವಾಯಿತು. ಇದಕ್ಕೆ ಕಾರಣ ಏನು ಎನ್ನುವುದನ್ನು ಸರಕಾರ ತೀವ್ರವಾಗಿ ವಿಚಾರ ಮಾಡಬೇಕು. ಜಯಧರ ಹತ್ತಿಬೀಜ ಎಂದು ಪುನಃ ಇದನ್ನು ಹಂಚಲಕ್ಕೆ ಹೋಗಬೇಡಿ. ಇದರ ಬಗ್ಗೆ ಸರಿಯಾದ ಹೇಳಿಕೆಯನ್ನು ಕೂಡ ಇಲ್ಲಿನ ಅಧಿಕಾರಿಗಳು ಜನಕ್ಕೆ ತಿಳಿಸುತ್ತಿಲ್ಲ. ಇವತ್ತಿನ ದಿವಸ ಇಂತಹ ಬೀಜ ಗಳನ್ನು ಹಾಕಿದುದರಿಂದ ಹತ್ತಿ ಬೆಳೆ ನಾಶವಾಗಲು ಕಾರಣವಾಯಿತು. ಇದಕ್ಕೆ ಬದಲಿಗೆ ಇನ್ನೂ ಸಂಶೋಧಿಸಿ ನಡೆಸಿ ಎಲ್ಲ ವಿಚಾರಗಳಿಂದಲೂ ಸುಧಾರಿತವಾದ ಮತ್ತು ಶಕ್ತಿಯುಳ್ಳ ಹತ್ತಿ ಬೀಜ ಗಳನ್ನು ಹಂಚಿದೇ ಮತ್ತು ತಕ್ಕ ಕಾರ್ಯಕ್ರಮಗಳನ್ನೂ ತೆಗೆದು ಕೊಳ್ಳದೇ ಈಗ ಈ ಕಾಯಿದೆ ಮಾಡಿ ಇಲ್ಲ ತಂದರೆ ಇದಕ್ಕೇನು ಬೆಲೆ ಇರುತ್ತದೆ ? ಈಗ ನಮ್ಮ ಜನರಲ್ ಹಾಸ್ಪಿಟ್ಟಲ್ಲಿನಲ್ಲಿ ಊಟಕ್ಕೆ 20—30 ಜನರಿದ್ದರೂ ಕೂಡ ಅಲ್ಲಿ ನಾಲ್ಕು ಜನ ಕೂಡ ಊಟ ಮಾಡುತ್ತಿಲ್ಲ. ಅದಕ್ಕೆ ಕಾರಣ ಏನು ಎಂದರೆ ಅಲ್ಲ ಅಡಿಗೆ ಮಾಡುವುದು ಸರಿಯಿಲ್ಲ ಎನ್ನುವುದು ಸರಕಾರ ಏನಾದರೂ ಯೋಚನೆ ಮಾಡಿದೆಯೇ? ಅಡಿಗೆ ಕೊಟಡಿ ಇದೆ ಮತ್ತು ಅಲ್ಲ 30—40 ಮಂದಿಗಳೂ ಇದ್ದಾರೆ. ಅಲ್ಲಿ ಇಬ್ಬರು ಮೂವರು ಊಟ ಮಾಡುವವರು ಬಿಟ್ಟರೆ ಇತರರು ಹೊರಗೆ ಊಟಕ್ಕೆ ಹೋಗುತ್ತಿದ್ದಾರೆ. ಹಾಗೆ ನಿಮ್ಮ ರೀಸರ್ಚ ಸ್ಟೇಷನ್ನಿನಲ್ಲೂ ಯೋಗ್ಯತೆ ಇಲ್ಲದವರು ಅಧಿಕಾರಿಗಳಿರುವುದರಿಂದ ಅಲ್ಲಿನ ಬೆಳೆಗಳು ನಾಶವಾಗುತ್ತಿವೆ. ಆದರಿಂದ ಯೋಗ್ಯರಾದ ಮತ್ತು ಅನುಭವವುಳ್ಳ ಅಧಿಕಾರಿಗಳನ್ನು ಇಲ್ಲಿ ನೇಮಿಸಲಕ್ಕೆ ಪ್ರಯತ್ನ ಮಾಡಬೇಕು. ಮತ್ತು ಉತ್ತಮ ಬೀಜಗಳು ದೊರೆಯುವಂತೆ ಮಾಡಬೇಕೆಂದು ಪುನಃ ಸರಕಾರದಲ್ಲಿ ಒತ್ತಾಯದಿಂದ ವಿನಂತಿ ಮಾಡಿಕೊಳ್ಳುತ್ತೇನೆ.

†ಶ್ರೀ ಶರಣಪ್ಪ (ದೇವದುರ್ಗ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮೈಸೂರು ರಾಜ್ಯದಲ್ಲಿ ಹೆಚ್ಚು ಹೆಚ್ಚಾಗಿ ಹತ್ತಿ ಬೆಳೆಯತಕ್ಕ ಪ್ರಾಂತ ಎಂದರೆ ಗುಲ್ಬರ್ಗಾ, ರಾಯಚೂರು, ಬಿಜಾಪುರ, ಧಾರವಾಡ, ಬಳ್ಳಾರಿ, ಮತ್ತು ಬೆಳಗಾಂನ ಕೆಲವು ಭಾಗಗಳು. ಈ ಒಂದು ಮೈಸೂರು ಕಾಟನ್ ಕಂಜ್ಯೂಲು ಬಿಲ್‌ನ್ನು ನಾವು ವಿಚಾರ ಮಾಡುವಾಗ ಇದರಲ್ಲಿ ಅತಿ ಮುಖ್ಯವಾಗಿ ಹಳ್ಳಿಯಲ್ಲಿರತಕ್ಕ ಅನೇಕ ಒಕ್ಕಲಿಗರ ವ್ಯವಸ್ಥೆಯ ಮೇಲೆ, ಒಂದು ಉದ್ಯಮದ ಮೇಲೆ ಅತಿ ಸೂಕ್ಷ್ಮವಾಗಿ ವಿಚಾರ ಮಾಡತಕ್ಕ ಒಂದು ಕಾಯಿದೆಯಾಗಿದೆ. ನೀವು ತಿಳುವಳಿಕೆಯಿಂದ ಇದನ್ನು ವಿಚಾರ ಮಾಡಿ ಇಲ್ಲಿರುವ ಸಂಶೋಧನಾಲಯಗಳಿಂದ ಬಂದದ್ದನ್ನು ಕಾರ್ಯ ರೂಪಕ್ಕೆ ತರಲು ಸರಕಾರದ ಗಮನಕ್ಕೆ ಒಂದೆರಡು ಮಾತುಗಳನ್ನು ತರಬೇಕೆಂದು ಇಲ್ಲಿ ನಿಂತಿದ್ದೇನೆ.

ಈ ಕಾಯಿದೆಯನ್ನು ವಿಚಾರ ಮಾಡಿ ನೋಡಿದರೆ ನಮ್ಮ ರಾಜ್ಯದಲ್ಲಿ ಅನೇಕ ಭಾಗದಲ್ಲಿ ಅನೇಕ ತರಹದ ಬೀಜವನ್ನು ಹಂಚಿ ಅದರಂತೆ ಅಭಿವೃದ್ಧಿ ಮಾಡಬೇಕೆಂದು ರಾಯಚೂರಿನಲ್ಲಿ ಹಾಗೂ ಇನ್ನು ಕೆಲವು ಭಾಗದಲ್ಲಿ ಜಯಧರ ಹಾಗೂ ಲಕ್ಷ್ಮಿ ಬೀಜಗಳೆಂದು ಕೊಟ್ಟು ಅದನ್ನು ಉಪಯೋಗ ಮಾಡಬೇಕೆಂದು ನಮ್ಮಲ್ಲಿ ಬಂದಿವೆ. ಇದೂ ಅಲ್ಲದೆ ಫಾರಂ ಜವಾರಿ ಇದರಲ್ಲಿ ತೋಡು ಹತ್ತಿ ಬೀಜಗಳೆಂದು ಆಯಾ ಸ್ಥಳದಲ್ಲಿ ಕೆಲವರು ಉಪಯೋಗ ಮಾಡುತ್ತಿದ್ದಾರೆ. ಕಾನೂನು ಸ್ವಲ್ಪ ಸ್ವಲ್ಪ ಸೂಕ್ಷ್ಮವಾದ ದೃಷ್ಟಿಯಿಂದ ನೋಡಿದರೆ ಈಗ ಹಂಚುವ ಹತ್ತಿ ಬೀಜಗಳಿಂದ ಉತ್ತಮ ಫಲ ದೊರೆಯದೆ ಉತ್ಪತ್ತಿ ಕೂಡ ಕಡಿಮೆಯಾಗುತ್ತಿರುವುದರಿಂದ ಈ ಉದ್ಯೋಗದಲ್ಲಿರುವವರ ಮೇಲೆ ಇದೊಂದು ಹೊರೆಯಾಗಿ ಪರಿಣಮಿಸಿದೆ. ನನ್ನ ಸಲಹೆ ಇದರಲ್ಲಿ ಈ ಕಾನೂನು ಜಾರಿಗೆ ತರುವ ಪ್ರದೇಶದಲ್ಲಿ ಆಯಾ ತಾಲ್ಲೂಕಿಗೆ ಸಂಬಂಧಪಟ್ಟ ಮತ್ತು ಒಕ್ಕಲಿಗೆ ಸಂಬಂಧಪಟ್ಟವರು ಇರುವಂತಹ ಕೋಆರ್ಡಿನೇಷನ್ನು ಕಮಿಟಿ ಎಂದು ಮಾಡಿಕೊಂಡು ಅವರ ಮೂಲಕ ಎಂತಹ ಬೀಜವನ್ನು ಅಲ್ಲಿಗೆ ಹಂಚಿದರೆ ಅನುಕೂಲವಾಗುತ್ತದೆ ಎನ್ನುವುದನ್ನು ತಿಳಿದು ಕೊಂಡು ತಜ್ಞರ ಹಾಗೂ ಒಕ್ಕಲಿಗರ ಅಭಿಪ್ರಾಯಗಳನ್ನು ಪಡೆದು ಒಂದು ರಿಪೋರ್ಟ್ ತರಿಸಿಕೊಳ್ಳಬೇಕು. ಅದರಂತೆ ಯಾವ ಯಾವ ಪ್ರದೇಶಕ್ಕೆ ಯಾವ ತರಹದ ಬೀಜವನ್ನು ಹಾಕಬಹುದು ಎನ್ನುವುದನ್ನು ಯೋಗ್ಯವಾಗಿಮಾಡಲು ಅನುಕೂಲವಾಗುತ್ತದೆ. ಅಲ್ಲದೆ ನಮ್ಮಲ್ಲಿ ಬೀಜವನ್ನು ಸರಿಯಾಗಿ ಎಷ್ಟುಮಟ್ಟಿಗೆ ಒದಗಿಸಬೇಕೋ ಅಷ್ಟು ಬಿತ್ತಗಳನ್ನು ಒದಗಿಸುವುದರ ಕಡೆಗೆ ವಿಚಾರ ಮಾಡಿಲ್ಲ. ಇದರ ಕಡೆಗೆ ಸರಕಾರ ತಕ್ಕ ಗಮನ ಕೊಡಬೇಕೆಂದು ನಾನು ಇಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈ ಕಾಯಿದೆಯಲ್ಲಿ ನಾವು ವಿಚಾರ ಮಾಡಿ ನೋಡಿದರೆ ಒಕ್ಕಲಿಗನಿಗೆ ಒಳ್ಳೆಯ ಬೀಜದ ಹೆಸರನ್ನು ಗೊತ್ತಿಲ್ಲದೆ ಇರುವಾಗ ಒಂದು ವೇಳೆ ಆ ಬೀಜ ಆವನು ತರದೆ ಇದ್ದರೆ, ಆ ದೋಷವನ್ನು ನಿರ್ಮೂಲ ಮಾಡುವ ಅವಕಾಶವನ್ನು ಕೊಟ್ಟಿಲ್ಲವಾಗಿ ಇಂಥ ಬೀಜವನ್ನೇ ಬಿತ್ತಬೇಕು ಎಂದು ಒತ್ತಾಯ ಮಾಡುವುದು ಒಳ್ಳೆಯದಲ್ಲ ಎನ್ನುವ ವಿಚಾರವಿದೆ.

ಇನ್ನೊಂದು ವಿಚಾರವೆಂದರೆ ಈಗ ವ್ಯಾಪಾರ ಮಾಡಲೂ ಕೂಡ ಅವಕಾಶವಿರಕೂಡದು ಎಂದು ಕ್ಲಾಜ್ ಮೂರರಲ್ಲಿ ಹೇಳಿದ್ದಾರೆ. ಈ ಒಂದು ವಿಧೇಯಕದಲ್ಲಿ ಹತ್ತಿಯ ನಿಯಂತ್ರಣ ಮಾಡಿ ಇಂಥ ವ್ಯಾಪಾರ ಕೂಡ ಮಾಡಕೂಡದು. ಆ ಒಂದು ಕಡೆಯಿಂದ ಇನ್ನೊಂದು ಕಡೆಗೆ ತರಕೂಡದು ಎಂದು ಒತ್ತಾಯ ಕೂಡ ಸಾಕಷ್ಟು ಮಾಡಲಾಗಿದೆ. ಈ ರೀತಿಯಾಗಿರುವುದರಿಂದ, ಜನರ ಅಭಿಪ್ರಾಯವನ್ನು ತೆಗೆದುಕೊಂಡು ಭೂಮಿಯಗುಣವನ್ನು ತಿಳಿದುಕೊಂಡು, ಅನೇಕ ತಜ್ಞರ ಅಭಿಪ್ರಾಯಗಳನ್ನು ತಿಳಿದು ಇದರಲ್ಲಿ ಪರಿಪಾಲನೆ ಮಾಡಿ ಎಲ್ಲ ವಿಷಯಗಳನ್ನು ನಾವೆಲ್ಲರೂ ತಿಳಿದನಂತರ ಈ ವಿಧೇಯಕವನ್ನು ತಂದು, ಅದನ್ನು ದೇಶಾದ್ಯಂತ ಅನ್ವಯಿಸಬೇಕು ಎಂದು ನನ್ನ ಮಾತನ್ನು ಮುಗಿಸುತ್ತೇನೆ.

[Mr. Speaker in the Chair].

†ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಸ್ವಾಮಿ, ಈ ಮಸೂದೆಯನ್ನು ಆತುರಾತುರವಾಗಿ ತಂದು ನಥಿಂಗ್ ಅನುಮತಿಯನ್ನು ಪಡೆಯಬೇಕೆಂದು ಪ್ರಯತ್ನಿಸುವುದು ಸರಿಯಲ್ಲ. ಇದು ಬಂಡವಾಳಶಾಹಿಗಳಿಗೆ ಅನುಕೂಲವಾದ ಒಂದು ಮಸೂದೆ ಎಂದು ಭಾವಿಸಬೇಕಾಗಿದೆ. ಇನ್ನು ಇದನ್ನು ಕೂಲಂಕಷವಾಗಿ ಪರಿಶೀಲಿಸಿ ನೋಡಿದರೆ ಕೆಲವು ಕ್ಲಾಜುಗಳಲ್ಲಿ ಹತ್ತಿ ಬೆಳೆಗಾರರಿಗೆ ಬೇಕಾದಷ್ಟು ಕಿರುಕಳವನ್ನು ಕೊಡತಕ್ಕ ಮಸೂದೆಯಾಗಿದ್ದು ಬಂಡವಾಳಶಾಹಿಗಳಿಗೆ ಅನುಕೂಲ ಮಾಡತಕ್ಕ ಕಾಯಿದೆಯಾಗಿದೆ. ಇದು ಸಚಿವರ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಆದರು ಕೂಡ ಈ ಮಸೂದೆ ಕಾನೂನಾಗಿ ಜಾರಿಗೆ ಬಂದ ಮೇಲೆ ಇದರ ಉಪಯೋಗವನ್ನು ಅನುಕೂಲಸ್ಥರು ತಮ್ಮ ಅನುಕೂಲ ಮೊರ್ಪಡಿಸಿಕೊಂಡು ಇದರಿಂದ ಲಕ್ಷಾಂತರ ರೂಪಾಯಿ ಫಾಯಿದೆ ಹೊಂದತಕ್ಕ ಸನ್ನಿವೇಶವಿದೆ.

(ಶ್ರೀ ಎಚ್. ಆರ್. ಕೇಶವಮೂರ್ತಿ)

ಈ ಮಸೂದೆಯನ್ನು ತಂದಿರುವುದು ರೈತರ ಮೇಲೆಹೇರತಕ್ಕ ಮತ್ತೊಂದು ಹೊರೆಯಾಗಿದೆ. ರೈತ ತಾನು ಆಹಾರಧಾನ್ಯಗಳ ಬೆಳೆಯನ್ನು ತಗೆದರೂ ಇತರ ಖರ್ಚಿಗೆ ಹಣ ಬೇಕಾಗುವುದರಿಂದ commercial crops ಬೆಳೆಯುತ್ತಾನೆ; ಕಡಲೆಕಾಯಿ ಮುಂತಾದುವನ್ನು ಬೆಳೆಯುವುದಕ್ಕೆ ಅವ ಕಾಶವಿರುತ್ತದೆ. ಆದರೆ ಈಗ ಸಭೆಯ ಮುಂದಿರುವ ಮಸೂದೆ ಕಾನೂನಾದ ಮೇಲೆ ಅದನ್ನು ಉಲ್ಲಂಘಿಸುವುದಕ್ಕೆ ಸಾಧ್ಯವಿಲ್ಲದೆ, ಹೆಚ್ಚರಿ ಹತ್ತಿಯ ಬೆಳೆಯನ್ನು ನಿಲ್ಲಿಸುವ ಸಂಭವ ಉಂಟು. ಈ ಕಾನೂನು ಬಂದ ಮೇಲೆ ಹತ್ತಿಬೆಳೆಯು ತಂಟೆಯೇ ಬೇಡ ಎಂದು ಹೇಳುತ್ತಾರೆ. ಈ ಕಾನೂನನ್ನು ತರುವುದಕ್ಕೆ ಮೊದಲು improved variety of cotton ಎಂದರೆ longestable cotton ಚೆನ್ನಾಗಿ ನೂಲು ಬರಬೇಕು ಮತ್ತು counts ಹಾಸಿ, ಬೆಳೆಯಬೇಕಾದರೆ ಅದಕ್ಕೆ ಏನೇನು ಅನುಕೂಲತೆಗಳಿರಬೇಕೆಂಬುದನ್ನು ಪರಿಶೀಲಿಸಬೇಕು. ಬೆಳೆಯತಕ್ಕ ಪ್ರದೇಶ ನೀರು ಕೊಡತಕ್ಕ ಬೀಜಕ್ಕೆಹೊಂದಿಕೊಂಡು ಹೋಗಬೇಕು. soil black cotton soil red soil—ನೀರು ಕೊಡತಕ್ಕ variatyಗೆ ಅನುಗುಣವಾಗಿರಬೇಕು. ಮತ್ತು ನೀರು ಕೊಡತಕ್ಕ ಸುಧಾರಿತ ಬೀಜಕ್ಕೆ ಮಳೆ ಬೀಳುವಿಕೆಯು ಹೊಂದಿಕೊಳ್ಳಬೇಕು. ಅದೇ ರೀತಿ ಹವಾಮಾನ ಕೂಡ ಅನುಸರಿಸಿಕೊಂಡಿರಬೇಕು. ಹಾಸನ ಜಿಲ್ಲೆಯಲ್ಲಿ, ಬರಸಿಕೆರೆ ಪ್ರದೇಶದಲ್ಲಿ ಬೆಳೆಯತಕ್ಕ ಹತ್ತಿ ಯಾವ ನೆಲದಲ್ಲಿ ಹಾಕಿದರೂ ಕೂಡ ಬಹಳ ಚೆನ್ನಾಗಿ ಬರುತ್ತದೆ. ಮಳೆ ಎಷ್ಟು ಹೆಚ್ಚು ಕಡಿಮೆಯಾದರೂ ಕೂಡ ಅದನ್ನು ತಡೆಯತಕ್ಕ ಶಕ್ತಿ ಇದೆ. ಹವಾಮಾನದಲ್ಲಿ ವ್ಯತ್ಯಾಸವಾದರೂ ಕೂಡ ತಡೆಯತಕ್ಕ ಶಕ್ತಿ ಇದೆ. ಸಾಮಾನ್ಯವಾಗಿ ಹತ್ತಿ ಹಾಕಿದಾಗ್ಗೆ ಪಶ್ಚಿಮದ ಗಾಳಿ ಬೀಸುವುದಕ್ಕೆ ಪ್ರಾರಂಭವಾದರೆ M. A. 5 Varietyಗೆ ಹೆಚ್ಚು ರೋಗ ಬರುತ್ತದೆ. ಮತ್ತೆ ಗಿಡ ತರೆ ಎತ್ತುವುದೇ ಇಲ್ಲ. ಅಲ್ಲ ಮೊದಲಿನಿಂದಲೂ ಬೆಳೆಯತಕ್ಕ ಗಿಡಕ್ಕೆ disease resistance ಇದೆ. ಮಳೆ ಹೆಚ್ಚು ಕಡಿಮೆಯಾದರೂ ತಡೆದು ಕೊಳ್ಳುತ್ತದೆ. ಭೂಮಿಯ ಸಾರ, ಹೆಚ್ಚು ಗೊಬ್ಬರವಿಲ್ಲದೇ ಇದ್ದರೂ ಹತ್ತಿ ಚೆನ್ನಾಗಿ ಬರುತ್ತದೆ. ರಾಗಿ ಹೊಲಕ್ಕೆ ಹತ್ತಿ ಹಾಕಿದರೆ ಮುಂದಿನ ವರ್ಷಕ್ಕೆ ಅದು ರಾಗಿಯ ಹೊಲಕ್ಕೆ ಗೊಬ್ಬರವಾಗಿ ಪರಿಣಮಿಸುತ್ತದೆ. ಹೀಗಿರುವಾಗ ಸರಿಯಾದ ಗೊಬ್ಬರ ಹಾಕುತ್ತಿದ್ದರೆ ಮಾತ್ರ improved variety ಚೆನ್ನಾಗಿ ಬೆಳೆಯುತ್ತದೆ. ಇದಲ್ಲದೆ ಸರ್ಕಾರದವರು ಅಥವಾ ಲೈಸೆನ್ಸ್ಡ್ ಡೀಲರ್ ಕೊಡತಕ್ಕ ಸುಧಾರಿತ ಬೀಜದಲ್ಲಿ germination ಬಹಳ ಕಡಿಮೆ percentage ಇರುತ್ತದೆ. ನಮ್ಮ ಕಡೆ ಮೊದಲಿನಿಂದಲೂ ಇರುವ ಬೀಜದಲ್ಲಿ 90% germination ಇದ್ದರೆ, ನೀವು ಕೊಡುವ ಬೀಜದಲ್ಲಿ 25% ಮಾತ್ರ ಇರುತ್ತದೆ. ಹತ್ತಿ ಸಾಮಾನ್ಯವಾಗಿ ಹಾಕಿದ ಮೇಲೆ ತಕ್ಷಣವಲ್ಲ ಮೊಳಕೆ ಹುಟ್ಟುತ್ತದೆ ಆ ರೀತಿಯಾದರೆ ಬೆಳೆ ಬರುತ್ತದೆ. ಇಲ್ಲದೆ ಇದ್ದರೆ ಎಷ್ಟು ವ್ಯವಸಾಯ ಮಾಡಿದರೂ ಕೂಡ ನಿರರ್ಥಕವಾಗುತ್ತದೆ. ಇದೇ ರೀತಿಯಲ್ಲಿ ನೀವು ಕೊಡತಕ್ಕ ಹತ್ತಿಗೆ ವಿಪರೀತ ರೋಗ ಬರುತ್ತದೆ. ರೋಗ ಬಂದರೆ ನಾವು ಸ್ಪ್ರೇ ಮಾಡುತ್ತಿರಬೇಕು. ಸರ್ಕಾರದವರು ಇದಕ್ಕಾಗಿ ಬೇಕಾದಷ್ಟು ಜನರನ್ನು ನೇಮಿಸಿದ್ದರೂ ಕೂಡ ಕಾಲಕ್ಕೆ ತಕ್ಕಂತೆ ಅವರು ಸ್ಪ್ರೇ ಮಾಡುವುದಿಲ್ಲ. ನಾಲ್ಕೈದು ಸಲ ಸ್ಪ್ರೇ ಮಾಡಿದ ಮೇಲೆ ತಕ್ಕ ಮಟ್ಟಿಗೆ ಹತ್ತಿ ಬೆಳೆಯಬೇಕಾಗಿದೆ ಮಾಮೂಲು ಹತ್ತಿಯಲ್ಲಿ ಸರಾಸರಿ 500 ರೂಪಾಯಿ ಬರುತ್ತದೆ ಅದೇ ನೀವು ಕೊಡತಕ್ಕ improved variety ಯಲ್ಲಿ ಕೊನೆ ಪಕ್ಷ 50 ರೂಪಾಯಿ ಕೂಡ ಸಿಕ್ಕುವುದಿಲ್ಲ. ಅದನ್ನು ಬೆಳೆಯತಕ್ಕ ವಿಧಾನ ಸರಿಯಾಗಿ ಗೊತ್ತಿರುವುದಿಲ್ಲ.

ಸರ್ಕಾರದವರು ಕೊಡತಕ್ಕ ಬೀಜವನ್ನು ಪ್ರಯೋಗ ಶಾಲೆಯಲ್ಲಿ, ಹತ್ತಿ ಬೆಳೆಯತಕ್ಕ ಪ್ರದೇಶಕ್ಕೆ ನೂರಾರು ಮೈಲಿ ದೂರವಿರುವ ಕಡೆ ಕುಳಿತುಕೊಂಡು try ಮಾಡಿ ಪಾಸ್ ಮಾಡುತ್ತೀರಿ. ಆ ಹತ್ತಿ ಬೀಜವನ್ನು ಹಾಕಿದರೆ ಬೇರೆ ಪ್ರದೇಶದಲ್ಲಿ ಹತ್ತಿ ಬೆಳೆ ಚೆನ್ನಾಗಿ ಬರುವುದೇ ಇಲ್ಲ. ನೀವು ಕೊಡುವ ಬೀಜಕ್ಕೂ ಹೊಂದಾಣಿಕೆಯಾಗುವುದಿಲ್ಲ. ಕಪ್ಪು ಭೂಮಿ ಮತ್ತು ಕೆಂಪು ಭೂಮಿ ಇದರಲ್ಲಿ ವ್ಯರ್ಥವಾದರೆ culture ಮಾಡುವುದಕ್ಕೆ ಬರುವುದಿಲ್ಲ. germinate ಆಗುವುದಿಲ್ಲ, ಬೆಳೆ ಬರುವುದಿಲ್ಲ, ಬಂದರೂ ಬಂದ ತಕ್ಷಣ ಕಾಯಿಲೆ ಬರುತ್ತದೆ. ಹೆಚ್ಚು ರೋಗ ಬಂದು ಎಲ್ಲ ನಷ್ಟವಾಗುತ್ತದೆ. ಸಾಮಾನ್ಯವಾಗಿ ಒಂದು ಎಕರೆಯೊಳಗೆ ನಮ್ಮಕಡೆ ಬೆಳೆಯುವ ಹತ್ತಿ 50 ಮಣ ಬಂದರೆ improved varietyಯಲ್ಲಿ ಹತ್ತು ಮಣ ಸಹ ಬೆಳೆಯುವುದಿಲ್ಲ. ಇದರಿಂದ ರೈತನಿಗೆ ಎಷ್ಟು ತೊಂದರೆ ಇದೆ ಎಂಬುದನ್ನ ನೋಡಬೇಕು.

ಸಾಮಾನ್ಯವಾಗಿ ಪ್ರತಿವರ್ಷ ಅರಸೀಕೆರೆ ಸೊಸೈಟಿಗೆ 50 ಸಾವಿರ ಮಣ ಹತ್ತಿ ಬರುತಿತ್ತು. Improved variety ಹಾಸಿಯಾದ ಹಾಗೆಲ್ಲ MA-2,CO-4, ಬೆಳೆಯುತ್ತಿದ್ದಾರೆ. ಅದೇ ರೀತಿ MA-5, 14, ಸಹ ಬೆಳೆಯುತ್ತಿದ್ದಾರೆ. ಇದರಲ್ಲಿ ಜನರಿಗೆ ಬೇಸರವಾಗಿ ಹತ್ತಿಯನ್ನು ಬಿಟ್ಟು ಕಳ್ಳೆಕಾಯಿ ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಹೀಗಾಗಿ ಇವತ್ತಿನ ದಿವಸ ಹತ್ತಿ ಆ ಸೊಸೈಟಿಗೆ ಬರುತ್ತಿಲ್ಲ. ಕಾರಣ ಜನರಿಗೆ ಹೆಚ್ಚಿಗೆ

ಉತ್ಪತ್ತಿ ತೆಗೆಯುವುದಕ್ಕೆ ಸಾಧ್ಯವಿಲ್ಲ. ಸರ್ಕಾರದವರು ಈ ರೀತಿ ನಿರ್ಬಂಧಗಳನ್ನು ಹಾಕುವುದರಿಂದ ಅರ್ಥಿಕವಾಗಿ ರೈತರಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. Quality ಉತ್ಪನ್ನ ಪಡಿಸಬೇಕಾದರೆ ರೈತರಿಗೆ ಆಗುವ ನಷ್ಟವನ್ನು ಕಟ್ಟಿಕೊಡಲು ಸಬ್ಸಿಡಿ ಕೊಡಬೇಕಾಗುತ್ತದೆ. ಒಂದು ಎಕರೆಗೆ improved varity ಹತ್ತಿ ಹಾಕಿದರೆ ಇಷ್ಟು ಲುಕ್ಸಾನಾಗುತ್ತದೆಯೋ ಆ ಲುಕ್ಸಾನನ್ನೂ ಸರ್ಕಾರದವರು ಕಟ್ಟಿ ಕೊಡಬೇಕು. ಈ ರೀತಿಯಾಗಿ ಮಾಡಿದರೆ ರೈತನಿಗೂ incentive ಬರುತ್ತದೆ ಆವಾಗ ರೈತ ಹತ್ತಿ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಇದು ಸರ್ಕಾರದ ಪ್ರಪ್ರಥಮ ಕೆಲಸ. ರೈತನಿಗೂ ಅನ್ಯಾಯ ಮಾಡಿದಹಾಗಾಗುವುದಿಲ್ಲ, ಸರ್ಕಾರಕ್ಕೂ ಅನ್ಯಾಯವಾಗುವುದಿಲ್ಲ. ಪೆರ್ಮಿಟ್ ಪ್ರಿಸ್ಕ್ರೈಬ್ ಮಾಡಿಬಿಟ್ಟರೆ, ಕಂಡೀಷನ್ಸ್ ಇಂಪೋಸ್ ಮಾಡಿದರೆ ರೈತನಿಗೆ ತೊಂದರೆ ತೊಂದರೆ ಯಾಗುತ್ತದೆ. ರೈತರಿಗೆ ಉಪಕಾರ ಮಾಡಿದ ಹಾಗೆ ಆಗುವುದಿಲ್ಲ. ಇಂಥ ಕಾನೂನು ಪಾಲನ ಬೇಕಾದರೆ ರೈತ ಹತ್ತಿ ಬೆಳೆಯುವುದನ್ನು ಬಿಟ್ಟುಬಿಡಬೇಕಾಗುತ್ತದೆ ಇಲ್ಲವೆ ಅವನು ಹಾಳಾಗುತ್ತಾನೆ.

5 ನೇ ಕ್ಲಾಜಿನಲ್ಲಿ ಇರುವುದನ್ನು ನೋಡಿದರೆ ಶ್ರೀಮಂತರಿಗೆ ಅನುಕೂಲವಾಗುತ್ತದೆ. ಲಕ್ಷಾಂತರ ರೂಪಾಯಿ ಬಂಡವಾಳ ಹಾಕಿರುವ ಬಡವಾಳದಾರರಿಗೆ ಚಿಕ್ಸ್‌ಟ್ಯೆರ್ ಮಿಲ್ ಇಟ್ಟಿರುವವರಿಗೆ ಅನುಕೂಲವಾಗುತ್ತದೆ. ಇದು ನ್ಯಾಯವಲ್ಲ. ಅಂಥವರಿಗೆ ಕಾಟನ್ ಮಿಕ್ಸ್ ಮಾಡಿ ಟ್ರಾನ್ಸ್‌ಪೋರ್ಟ್ ಮಾಡಲು ಅವಕಾಶವಿದೆ. ಆದುದರಿಂದ ಅವರಿಗೂ ಕೂಡ ಬಹಿಷ್ಕಾರ ಹಾಕಬೇಕು. ಅವರು ಮಿಕ್ಸ್ ಮಾಡಬಹುದು ಎಂದು ಇರುವುದು ಅರ್ಥವಿಲ್ಲದ್ದು.

ಇನ್ನು ಕ್ಲಾಜ್ 6 (3)

"Any licenced dealer who contravenes the provisions of sub-section (2) of Section 4 and any owner or person in charge of a factory who contravenes ...."

ಇದರಲ್ಲಿ ಜುರ್ಮಾನೆ ವಿಧಿಸುವುದು ಎಲ್ಲರಿಗೂ ಒಂದೇ ರೀತಿಯಾಗಿದೆ ದೊಡ್ಡ ದೊಡ್ಡ ಫ್ಯಾಕ್ಟರಿ ಇಟ್ಟವರು ತಪ್ಪು ಮಾಡಿದರೆ 500 ರೂಪಾಯಿ ಜುರ್ಮಾನೆ ನಗುತ್ತಾ ಕೊಟ್ಟುಬಿಡುತ್ತಾರೆ. ಇದು ಸರಿಯಲ್ಲ.

Mr. SPEAKER.—Does the Hon'ble Member say that the penalties should differ the offence being the same? Should a company be treated differently from a persons?

Sri H. R. KESHAVA MURTHY.—We must make a distinction. The company is rich and deals with large materials and money and hence has greater responsibility, not so the ordinary ryot.

ಆದುದರಿಂದ ಜಿನ್ನಿಂಗ್ ಮಿಲ್ ಚಿಕ್ಸ್‌ಟ್ಯೆರ್ ಮಿಲ್ ಇಟ್ಟುಕೊಂಡವರು ತಪ್ಪು ಮಾಡಿದರೆ ಜಾಸ್ತಿ ಜುರ್ಮಾನೆ ಹಾಕಬೇಕಾಗುವುದು. ಯಾಕೆಂದರೆ ಒಂದೇ ವ್ಯವಹಾರದಲ್ಲಿ ಅಂಥವರು ಲಕ್ಷಾಂತರ ರೂಪಾಯಿ ವ್ಯಾಪಾರವನ್ನು ಮಾಡುತ್ತಾರೆ. ಇಷ್ಟು ಅಲ್ಪ ಜುರ್ಮಾನೆ ಅವರು ಸುಲಭವಾಗಿ ಕೊಟ್ಟು ಬಿಡುತ್ತಾರೆ. ಆದ್ದರಿಂದ ಅವರಿಗೆ ತಕ್ಕಂತೆ ಶಿಕ್ಷೆಯನ್ನು ವಿಧಿಸುವುದು ಒಳ್ಳೆಯದು.

ಇನ್ನು ಕ್ಲಾಜ್ 8 ಪ್ರೊವಿಜನ್‌ನಲ್ಲಿ ಹೀಗೆ ಇದೆ—

"..... he supports his claim, whichever is earlier or later..."

ಇದರಲ್ಲಿ ಎರಡು ಐಡಿಯಾ ಬರುತ್ತದೆ. ಇನ್ನು 11 (2) ನಲ್ಲಿ ಇರುವ ಹಾಗೆ 20 ರೂಪಾಯಿ ಜುರ್ಮಾನೆ ವಿಧಿಸಬೇಕೆಂದು ಇದೆ.

"Any person who contravenes the provisions of sub-section (1) shall, on conviction, be punished with fine which may extend to twenty rupees."

Mr. SPEAKER.—Offence is an offence, whether the offender is a big or small man.

Sri H. R. KESHAVA MURTHY.—If a cultivator commits the offence, there should be a limit for the fine. The trader deals in larger goods and the offence is greater. If a mill-owner commits it, the offence is greater still. A distinction should be drawn.

(SRI H. R. KESHVAMURTHY)

ಕಾನೂನು ಮುಂದೆ ಎಲ್ಲರೂ ಒಂದೇ. ದೊಡ್ಡವರ ತಪ್ಪನ್ನು ಮುಚ್ಚುವದಕ್ಕೆ ಈ ಕ್ಲಾಜು ಇದ್ದ ಹಾಗೆ ಇದೆ. ಇದು ಸರಿಯಲ್ಲ. ಆದುದರಿಂದ ಈ ಪ್ರೊವಿಜನ್ ತೆಗೆದು ಹಾಕಬೇಕೆಂದು ಹೇಳುತ್ತೇನೆ.

† Sri ANNARAO GANAMUKHI (Afzalpur).—Sir, I welcome this measure. We know that agriculture is assuming importance in India. Not only there is stagnancy in agricultural production, there is in fact retardation. Cotton production is going down in particular. We are aware that we are spending 60 crores on cotton imports. Therefore it is of utmost importance that land under cotton cultivation should not be diverted to other crops.

We are informed that if good seeds are supplied to cotton-growers, we may increase production by 15%. The quality of seeds now generated in Bombay area has gone down and we are told the Department is not bestowing sufficient attention to supply improved seeds.

Mr. SPEAKER.—A lot of research schemes are in operation.

Sri ANNARAO GANAMUKHI.—The quality of research is poor. I do not know whether there are sufficient number of research workers.

4-00 P.M.

Secondly, if there are researches, they have the knowledge. They do not cultivate. One who cultivates has no knowledge and one who does not cultivate has all the knowledge. The field of the farmer has not been a research station. Research has to be taken to the field itself. There is a gap between the knowledge and its practical application. We are speaking of so many schemes and spending so much money. But why there is stagnation in agriculture ? In advanced countries, only by sowing improved variety of seeds, they are getting 15 per cent more of the produce, whereas what is happening here in our State, as far as cotton and other things are concerned, is that the farmers are not actually supplied with improved variety of seeds and whatever seeds were supplied before 10 years are continued to be supplied now also. Our friend was saying that about 3,000 bags of seeds were distributed year-before-last, but now it has come to 800 bags. It means that production has gone down. We have not been able to produce that much of cotton which we used to produce before. Therefore, it is of utmost importance that we should not be happy with this legislation only, but we must bestow all attention, because we are told that even if the farmers are supplied with good seeds, the land is not sufficiently tested. What sort of fertilizers should be applied to the particular lands, is also not known. I think the Agriculture Department is duing one thing *i.e.*, shopping business—distribution of diesel sets, distribution of engines, distribution of seeds and be happy with it. This is not a happy situation. This shopping business should be entrusted to somebody, who is running business. They must actually go to the fields and advise the farmers. They have distributed such seeds to the farmers that they are losing faith in the

departmental seeds supplied. Now, you are taking whole responsibility. You are telling them to sow particular seeds. You are delimiting the whole area. If you do it, all the necessary equipment must be there and you have to advise them properly and supply good seeds to them. Is it not the duty of the Department to evolve an alternative method to import some seeds from other States and experiment with them ? I am told that shis experimentation itself takes about 5 years. Then what should happen to these present seeds ? If they have deteriorated, I do not think we will be able to produce much.

Mr. SPEAKER.—Greater need for this legislation and the follow-up he is suggesting.

Sri ANNARAO GANAMUKHI.—If you are taking sufficient power to regulate the whole thing, then you must have sufficient resources; I do not think that resources are found in the Department. With all the money that we are spending, the result is nil. This should not happen, because the whole growth of industry depends on agriculture. We are exporting textiles to other countries which is a source of foreign exchange, and if we are not able to produce good cotton in sufficient quantity, we will heve to spend more money on imports. So, it is of utmost importance that the Agriculture Department should be more active. The Minister concerned should energise the Department.

Mr. SPEAKER.—The House may energise the Ministers.

Sri ANNARAO GANAMUKHI.—The House can only consume the produce.

Mr. SPEAKER.—The House is capable of much more than all that.

Sri ANNARAO GANAMUKHI.—We are producing some knowledge, but that knowledge is not reaching the persons concerned. The farms themselves should be converted into research stations. So, I would request the Government that before taking so many powers, let them equip themselves with all the necessary knowledge and also resources so that the farmers may be benefitted by such legislations.

†శ్రీమతి బనవరాజేశ్వరి (మాన్వి).—మాన్య అధ్యక్షరే, నమ్మ ముందె ఇరతక్క ఈ బిల్‌ను స్వాగతిసుతా కెలవు విచారగళన్ను తమ్మ గమనక్కె తరబేకెందు అపేక్షిసుత్తేనె. ఈ బిల్లన్ను తందద్దు బహళ ఒళ్ళెయదు ఎందు నన్న మనస్సిగె అనిసుత్తదె. ఏకేందరె ఇవత్తిన దివస ఈ బీజగళ కులబేరికెయింద, ఏరియా కంప్రొర్ మాడదే ఇరువుదరింద ఒందు రీతియింద రైతరిగె అనానుకూలవే ఆగుతా ఇదె. తిళిదో తిళియదెయో నేరె హొరెయవరు బెళెయుత్తిద్దారె నావూ బెళెయోణ ఎందు హేళి ఆ బీజగళన్ను నమ్మల్లూ బెళెదు-అవు బెళెయుత్తదెయో బెళెయుదిల్లవో ఎంబుదు గొత్తిల్లదే రైతరు అదన్ను ఉపయోగిసి తుంబా తొందరెగె ఈడాగుతా ఇద్దారె. ఉదాహరణార్థవాగి హేళ బేకేందరె నమ్మ జిల్లెయల్ల నానే పండరాపురద హత్తి ఉత్తమవాద ఫనలు దొరెయుత్తదె ఎందు తిళిదుకొండు ఈ వర్ష సుమారు 30-40 ఎకరెయవరెగూ హాకిదె, అదరల్లి సుమారు 75 పర్సెంటు మిక్స్‌డ్ సీడ్స్ ఇద్దవు. పండరాపురద బీజ బొరో బెళె కొట్టితు, మిక్స్‌డ్ సీడ్స్ హత్తి బెళెయుదె కెటు హోద ప్రసంగ ననగె గొత్తిదె. హీగిరువాగ కంప్రొర్ట్ ఏరియా అంత మాడి రైతరిగె అనుకూల మాడిద్దు ఒళ్ళెయదాయితు ఎందు నాను హేళుత్తేనె. ఈ ఆక్ట్‌నింద స్వల్పమట్టిగె తిళివళికె కడిమె ఇరతక్క రైతరిగె అనుకూలవాగుత్తదె ఎందు నన్న అభిప్రాయ. మత్తు ఈ కంప్రొర్ట్ ఏరియా మాడువు దక్కంత ముంచె డిపార్ట్‌మెంటినవర అనుభవవన్ను రైతరు పడెయబేకెంబ ఒందె అభిప్రాయ ఇదె. ఏకేందరె ఇవత్తిన దివస నమ్మ తుంగభద్రా యోజనెయ కెళగె డ్రై

(ಶ್ರೀಮತಿ ಬಸವರಾಜೇಶ್ವರಿ)

ಕಮ್ ಪೆಟ್ ಇರುವ ಕಡೆ 1-20 ಸಿ ಓ 2 ಬೆಳೆಯುವುದಕ್ಕೆ ಸಾಧ್ಯವಿದೆ ಎಂದು ಡಿಪಾರ್ಟಿಮೆಂಟಿನವರು ಹೇಳುತ್ತಾ ಇದ್ದಾರೆ. ಈಗ್ಗೆ ಸುಮಾರು 2ವರ್ಷಗಳಿಂದ ರೈತರುಇದೇ ಪ್ರಯತ್ನದಲ್ಲಿದ್ದಾರೆ. ಆದರೆ ಯಾವ ಜಾಗದಲ್ಲಿ ಯಾವ ಹತ್ತಿಯನ್ನು ಹಾಕಬೇಕೆಂಬುದನ್ನು ಇಲ್ಲಿಯ ವರೆಗೂ ಯಾರೂ ಖಚಿತಮಾಡಿಲ್ಲ. ರೈತರಿಗೆ ಇದನ್ನು ಇಲಾಖೆಯವರು ಮೊದಲು ಪಕ್ಕಾ ಮಾಡಿಕೊಡಬೇಕು. ಆದರೆ ಈ ಹಿಂದೆ ಮಾತನಾಡಿದ ಶ್ರೀಮಾನ್ ಪಾಟೀಲರವರು ಹೇಳಿದ ವಿಚಾರ ಗಳು ಪೂರ್ಣ ಅನುಭವದಿಂದ ಕೂಡಿದವುಗಳಾಗಿವೆ. ಆದುದರಿಂದ ಇಲಾಖೆಯವರು ಮೊದಲು ಈ ಏರಿಯಾ ಪ್ರಿಸ್‌ಕ್ರೈಬ್ ಮಾಡದೆ ಇಂಥಲ್ಲೇ ಇಂಥಾ ಹತ್ತಿ, ಹಾಕಬೇಕು, ಇಂಥಲ್ಲೇ ಜಯಧರ ಹತ್ತಿ ಹಾಕಬೇಕು ಎಂದು ಹೇಳತಕ್ಕದ್ದು ಅಷ್ಟು ಸರಿಕಾಣುವುದಿಲ್ಲ. ಮೊದಲು ಏರಿಯಾ ಪ್ರಿಸ್ ಕ್ರೈಬ್ ಮಾಡಿ ಅನಂತರ ಯಾವ ಪ್ರದೇಶಕ್ಕೆ ಯಾವ ಹತ್ತಿ ಹಾಕಬೇಕೆಂಬುದನ್ನು ಖಚಿತ ಮಾಡುವುದು ಒಳ್ಳೆಯದೆಂದು ಕಾಣುತ್ತದೆ. ಇನ್ನು ಇತ್ತೀಚೆಗೆ ಮಿಡಿತೆ ಹುಳುಗಳ ಹಾವಳಿ ಜಾಸ್ತಿಯಾದಮೇಲೆ ಹತ್ತಿ ಬೆಳೆಯುತ್ತಿದ್ದ ಜಾಗದಲ್ಲಿ ಈಗ ಸೇಂಗಾ ಬೆಳೆಯಲಿಕ್ಕೆ ಪ್ರಾರಂಭಮಾಡಿದ್ದಾರೆ. ಆದುದರಿಂದ ಇಲ್ಲಿಯವರೆಗೂ ಸರ್ಕಾರದವರು ಯಾವ ಪ್ರದೇಶದಲ್ಲಿ ನಿರ್ದಿಷ್ಟವಾಗಿ ಯಾವ ಬೆಳೆಯನ್ನು ಬೆಳೆಯ ಬೇಕೆಂಬುವನ್ನು ತಿಳಿಸಿಲ್ಲ. ಆದುದರಿಂದ ನಾನೀಗ ತಿಳಿಸಲಿಚ್ಛಿಸುವುದೇನೆಂದರೆ: ಸರ್ಕಾರದವರು ಇಂಥಲ್ಲಿ ಇಂಥಾ ಹತ್ತಿಯನ್ನೇ ಬೆಳೆಯಬೇಕೆಂಬುದನ್ನು ನಿರ್ಧರಿಸುವ ಮೊದಲು ಏರಿಯಾ ಪ್ರಿಸ್ ಕ್ರೈಬ್ ಮಾಡಿ ಅನಂತರ ಇದನ್ನು ಮಾಡಬೇಕೆಂದು ಹೇಳುತ್ತೇನೆ. ಆದರೆ ಶ್ರೀಮಾನ್ ಎಂ. ಆರ್. ಪಾಟೀಲರು ಜಯಧರ ಹತ್ತಿಯ ಬೀಜ ರೈತರಿಗೆ ದೊರೆಯುವುದು ಬಹಳ ಲೇಟಾಗುತ್ತದೆಂದು ಹೇಳಿದರು. ಆದರೆ ಇವುಗಳನ್ನು ಮಲ್ಟಿಪ್ಲೈ ಮಾಡಬೇಕಾದ್ದು ರೈತರ ಕರ್ತವ್ಯ. ಎಲ್ಲಾ ರೈತರೂ ಏಕ ಕಾಲಕ್ಕೇ ಬಂದು 100 ಟೀಲ ಹತ್ತಿಬೀಜ ಕೊಡಿ ಎಂದರೆ ಎಂಥವರಿಗಾದರೂ ತೊಂದರೆಯೇ. ಆದುದರಿಂದ ಆಯಾ ಏರಿಯಾದಲ್ಲಿ ಇದರ ಬೀಜಗಳನ್ನು ಹೆಚ್ಚು ಹೆಚ್ಚು ತಯಾರುಮಾಡತಕ್ಕ ಬಗ್ಗೆ ಸರ್ಕಾರದವರೂ ಕೂಡ ಪ್ರೋತ್ಸಾಹ ನೀಡಬೇಕು. ರೈತರಿಗೆ ಬತ್ತನೆ ಕಾಲದಲ್ಲಿ ಕ್ರಿಮಿನಾಶಕ ದ್ರವದಲ್ಲದ್ದಿದ್ದ ಬೀಜಗಳನ್ನು ಸರಬರಾಯಿ ಮಾಡಬೇಕು. ಹೀಗೆ ಮಾಡದೆ ಇರುವುದರಿಂದ ಈಗ ಪೀಕು ಬಹಳ ಕಡೆ ಕೆಡುತ್ತಿದೇ ಇದಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತೇನೆ. ಇನ್ನು ರೈತ ರಿಗೆ ದೊರೆಯುತಕ್ಕ ನಬೆಸಿಡಿ ಸಹಾ ಸಕಾಲಕ್ಕೆ ಸರಿಯಾಗಿ ದೊರೆಯುತ್ತಿಲ್ಲ. ಇದರಿಂದ ಪೀಕು ಸರಿ ಯಾಗಿ ಬಾರದೆ ಕೆಟ್ಟುಹೋಗುತ್ತಿದೆ. ಇಂಥಾ ಬೀಜಗಳಿಂದ ಜರ್ಮಿನೇಷನ್ ಕೂಡ ಸರಿಯಾಗಿ ಬರು ತ್ತಿಲ್ಲ. ಆದುದರಿಂದ ಈ ಬಿಲ್ಲು ಜಾರಿಗೆ ಬಂದಮೇಲೆ ಜನರಿಗೆ ಅನುಕೂಲವಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಹೀಗೆ ರೈತರಿಗೆ ಸಹಾಯ ನೀಡಿದ ನಂತರ ಇನ್ನು ಈ ಹತ್ತಿಗೆ ಒಂದು ಸರಿಯಾದ ಧಾರಣೆಯನ್ನು ನಿಗದಿಮಾಡಬೇಕಾಗಿದೆ. ಆದರೆ ಈಗಲೂ ಜಿನ್ನುಗಳಲ್ಲೂ, ಮಿಲ್ಲುಗಳಲ್ಲೂ ಉತ್ತಮ ದರ್ಜೆಯ ಹಾಗೂ ಕೀಳು ದರ್ಜೆಯ ಹತ್ತಿಯನ್ನು ಮಿಕ್ಸ್ ಮಾಡುತ್ತಿದ್ದಾರೆ. ಇದಕ್ಕೆಲ್ಲಾ ವ್ಯಾಪಾ ರಸ್ಥರೇ ಕಾರಣವೆಂದು ನಮಗೆಲ್ಲರಿಗೂ ಗೊತ್ತಿದೆ. ಹೀಗೆ ಈ ಅರಳೆ ಮತ್ತು ಹತ್ತಿಯನ್ನು ಮಿಕ್ಸ್ ಮಾಡುವುದನ್ನು ತಡೆಗಟ್ಟಲು ಈ ಮಸೂದೆಯಲ್ಲಿ ಹೆನಾಲ್ಟ್ ಹಾಕಬೇಕೆಂದು ಹೇಳಿರತಕ್ಕದ್ದು ನ್ಯಾಯ ವಾಗಿದೆ. ರೈತರಿಗೆ ಸರ್ಕಾರದವರು ಈ ಅನುಕೂಲಗಳನ್ನು ಒದಗಿಸದಿದ್ದರೆ ಮುಂದೆ ಈ ಬೆಳೆ ಹಾಳಾಗುತ್ತದೆ; ಇದಕ್ಕೆ ಧಕ್ಕೆ ಬರುತ್ತದೆ. ಆದುದರಿಂದ ಸರ್ಕಾರದವರು ಈ ಕಾನೂನನ್ನು ಬೇಗ ಜಾರಿಗೆ ತಂದು ರೈತರು ಉತ್ತಮ ದರ್ಜೆಯ ಹತ್ತಿಯನ್ನು ಬೆಳೆಸುವುದಕ್ಕೆ ಅನುಕೂಲ ಮಾಡಿಕೊಟ್ಟು ತನ್ಮೂಲಕ ಅವರಿಗೆ ಒಂದು ಸರಿಯಾದ ಬೆಲೆ ಸಹಾ ಸಿಗುವಂತೆ ಮಾಡಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನಾನು ನನ್ನ ಮಾತು ಗಳನ್ನು ಮುಗಿಸುತ್ತೇನೆ.

Mr. SPEAKER.—I am not giving chance to anybody else. One hour was allotted. One hour and fifteen minutes has elapsed. The Debate has been more than adequate. I extend the period by another half-an-hour. There are also amendments. I will call upon the Hon'ble Minister to reply.

Sri C. J. MUCKANNAPPA.—I want only ten minutes, Sir.

Mr. SPEAKER.—I will give the Hon'ble Member five minutes only. Let him be brief.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಹಾಗೆ ಕಾಲ ನಿಗದಿ ಮಾಡುತ್ತೀರೆಂದು ತಿಳಿದಿದ್ದರೆ ನಾನು ಎಲ್ಲಿಗೂ ಹೋಗುತ್ತಿರಲಿಲ್ಲ. ನನಗೆ ೨ನಿಮಿಷ ಕೊಟ್ಟರೆ, ಸಾಕು. ಸ್ವಾಮಿ

ಅಧ್ಯಕ್ಷರೇ ಮೊದಲು ಈ ಕಾ ಟನ್ ಕಂಚ್ರೋಲ್ ಬಿಲ್ಲು ಬಂದಾಗ ಇದರಲ್ಲಿ ಏನೋ ಬುದ್ಧಿವಂತಿಕೆ ಇದೆ, ಇದರಲ್ಲಿ ಅಂಥಾ ಉತ್ಕೃಷ್ಟವಾದ ಅಂಶಗಳು ಅಡಗಿವೆ ಎಂದು ತಿಳಿದುಕೊಂಡಿದ್ದೆ. ಆದರೆ ಇತ್ತೀಚೆಗೆ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದನ್ನು ನೋಡಿದರೆ ಹತ್ತಿ ಬೆಳೆಗೆ ಈ ಬಿಲ್ಲು ಒಂದು ಕುಠಾರ ಪ್ರಾಯವಾಗಿದೆ ಎಂಬುದು ನನ್ನ ಅಭಿಪ್ರಾಯ. ಇವೇ ಅಸೆಂಬ್ಲಿಯಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಸರ್ಕಾರದವರು ಈ ಹತ್ತಿ ಬೆಳೆ ವಿಚಾರದಲ್ಲಿ ಗೊಟ್ಟಿಪಾತಕ್ಕ ಉತ್ತರಗಳನ್ನು ತುಲನಮಾಡಿ ನೋಡಿದರೆ ಹಾಗೂ ಶ್ರೀ ಎಂ. ಆರ್. ಪಾಟೀಲರವರು ಮಾತನಾಡಿರತಕ್ಕದ್ದನ್ನು ನೋಡಿದರೆ ಈ ಕಾಟನ್ ರಿಸರ್ಚ್ ಸೆಂಟರಿನಲ್ಲಿ ಸರಿಯಾದ ಯಾವ ಒಬ್ಬ ಅಧಿಕಾರಿಯೂ ಇದ್ದಹಾಗೆ ಕಾಣುವುದಿಲ್ಲ. ಈ ದಿವಸ ನಮ್ಮಲ್ಲಿ ಜಯಧರ ಹತ್ತಿ, ಲಕ್ಷ್ಮಿ ಹತ್ತಿ, ಆ ಹತ್ತಿ, ಈ ಹತ್ತಿ ಬೆಳೆಯುತ್ತಿದ್ದಾರೆಂದು ಹೇಳುತ್ತಿದ್ದಾರೆ. ಆದರೆ ಈ ದಿನ ಆ ಹುಬ್ಬಳ್ಳಿ, ಗದಗ್, ದಾವಣಗೆರೆ, ಚಿತ್ರದುರ್ಗ ಈ ಮಾರ್ಕೆಟ್ಟುಗಳಲ್ಲಿ ನಮಗೆ ಸಾಕಾಗುವಷ್ಟು ಹತ್ತಿ ಸರಬರಾಯಿ ಆಗುತ್ತಿದೆಯೇನು. ಹೀಗೆ ನಮಗೆ ನಮ್ಮಲ್ಲಿ ಬೆಳೆಯತಕ್ಕದ್ದು ಸಾಕಾಗದೆ ಇರುವಾಗ ಈ ಹತ್ತಿಯನ್ನು ಹೊರಗಡೆಗೆ ರವಾನೆ ಮಾಡಲು ಎಳೆ ಉದ್ದನಾಗಿ ಬರತಕ್ಕ, ಅಂಥಾ ಹತ್ತಿ ಬೆಳೆಯ ಬೇಕೆಂದು ಬಾಯಲ್ಲಿ ಸಾವಿರಾ ಹೇಳುತ್ತಿದ್ದಾರೆ. ಇವರಿಗೆ ಚೇಳಿನ ಮಂತ್ರ ತಿಳಿಯದಿದ್ದರೂ ಹಾವಿನ ಬುಟ್ಟಿಯಲ್ಲಿ ಕೈ ಹಾಕಲಿಕ್ಕೆ ಹೊರಟಿದ್ದಾರೆ. ಇದನ್ನು ನಾನು ಖಂಡಿತ ಒಪ್ಪುವುದಿಲ್ಲ,

> This is the Department which has to implement this Act. There, through this Department people have to receive the benefit of this Bill.

ಹೀಗೆ ಇವರು ಇಂಥಾ ಕಡೆಯಲ್ಲೇ ಹತ್ತಿ ಬೆಳೆಯಬೇಕೆಂದು ಹೇಳುತ್ತಿರುವಾಗ ಇವರು ರೈತರಿಗೆ ಬೇಕಾದ ಸೌಕರ್ಯಗಳನ್ನೆಲ್ಲಾ ಒದಗಿಸಿಕೊಟ್ಟಿದ್ದಾರೇನು ? ಡೆಲ್ಲಿಯಿಂದ ಹಿಡಿದು ಹಳ್ಳಿಯವರೆಗೂ ನಮ್ಮಲ್ಲಿ ಆಹಾರ ಧಾನ್ಯಗಳನ್ನು ಹೆಚ್ಚಿಗೆ ಬೆಳೆಯಬೇಕು ಎಂದು ಬಾಯಲ್ಲಿ ಬೇಕಾದಷ್ಟು ಪ್ರಚಾರ ಮಾಡುತ್ತಿದ್ದಾರೆ. ಆದರೆ ನಮ್ಮಲ್ಲಿ ಇದಕ್ಕೆ ಸಂಬಂಧಿಸಿದ ಆ ಒಂದು ಅಗ್ರಿಕಲ್‌ಚರಲ್ ಇಲಾಖೆಯೆಂಬುದು ಇದೆ ಎಂದು ನಾನಂತೂ ನಂಬಿಲ್ಲ ಆ ಇಲಾಖೆಯೇ ಇಲ್ಲಲ್ಲ ಎಂದು ಹೇಳಬಹುದು. ಬೆಳೆಗಳಿಗೆ ರೋಗ ಬಂದಾಗ ಔಷಧಿ ಕೊಡಿ ಎಂದರೆ ರೋಗ ಕಳೆದ ನಂತರ ಔಷಧಿಯನ್ನು ಸಪ್ಲೈ ಮಾಡುತ್ತಾರೆ. ಬಿತ್ತುವುದಕ್ಕೆ ಬೀಜ ಕೊಡಿ ಎಂದರೆ, ಬಿತ್ತನೆ ಕಾಲ ಕಳೆದಮೇಲೆ ಬೀಜ ಕೊಡುತ್ತಾರೆ. ಈ ಹಿಂದೆ ಶ್ರೀಮಾನ್ ಹತ್ತಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ಈ ಇಲಾಖೆಯಲ್ಲಿ ನೌಕರರು ಬಹಳ ಆಗಿದ್ದಾರೆಂದು ಹೇಳುತ್ತಿದ್ದರು. ಇನ್ನು ಈ ನೌಕರರ ಸೀನಿಯಾರ್ಟಿಯನ್ನೂ ತೀರ್ಮಾನವಾಗಿಲ್ಲ. ನೌಕರರಲ್ಲಿ ಯಾರಿಗೂ ಉತ್ಸಾಹವಿಲ್ಲ ; ಹೀಗಾದರೆ ಯಾರು ಉತ್ತೇಜನದಿಂದ ಕೆಲಸ ಮಾಡುತ್ತಾರೆ ? ದೇಶದಲ್ಲಿ ಆಹಾರ ಧಾನ್ಯಗಳನ್ನು ಹೆಚ್ಚಿಸಲು ಹೊರಟು ಅದನ್ನು ಪೂರೈಸಿದ್ದಾಯಿತು. ಈಗ ಹತ್ತಿ ಬೆಳೆಯನ್ನು ಉದ್ಧಾರಮಾಡಲು ಹೊರಟಿದ್ದಾರೆ. ನಮ್ಮ ಸರ್ಕಾರದವರು ಎತ್ತಕಡೆಗೆ ಸಾಗುತ್ತಿದ್ದಾರೆಂಬುದೇ ತಿಳಿಯಲಾಗಿದೆ. ಇವರು ಹೀಗೆ ಹೋಗುತ್ತಿದ್ದರೇ ನಾವು ಆ ಹಿಂದಿನ ಅನಾಗರೀಕರಾದ ಕಾಡುಜನಗಳ ಮಟ್ಟಕ್ಕೆ ಪುನಃ ಹಿಂದುರುಗುತ್ತಿದ್ದೇವೇನೋ ಅಂತ ನನಗೆ ಅನಿಸುತ್ತಿದೆ. ಹಿಂದೆ ಶ್ರೀ ರಾಚಯ್ಯನವರು ಮಂತ್ರಿಗಳಾಗಿದ್ದಾಗ ಇದಕ್ಕೆ ಬಹಳ ಅನುಕೂಲ ಮಾಡುವುದಾಗಿ ಹೇಳುತ್ತಿದ್ದರು. ಅದಾಯಿತು.

ಇದರೊಳಗಿರುವ ಪೆನಾಲ್ಟೀಸ್ ಕ್ಲಾಸ್ 6 ರಲ್ಲಿ ವಿವರಣೆಗಳನ್ನು ಹೇಳಿದ್ದೀರಿ. ಯಾವಾಗ ಯಾವ ಕಾನೂನು ತೆಗೆದುಕೊಂಡು ಬಂದರೂ ಯಾರನ್ನು ಶಿಕ್ಷೆ ಮಾಡಬೇಕು ಹೇಗೆ ಶಿಕ್ಷೆಮಾಡಬೇಕು ಎನ್ನುವುದನ್ನು ಪ್ರತಿಯೊಂದು ಬಿಲ್ಲಿನಲ್ಲೂ ತರುತ್ತ ಅದರಲ್ಲಿ ಸರಕಾರದ ಅಧಿಕಾರ ಹೇಗಿರಬೇಕು ಎನ್ನುವುದನ್ನು ಹೇಳುತ್ತಿರುತ್ತಾರೆ. ಸರಕಾರ ಮೊದಲು ನವಲತ್ತುಗಳನ್ನು ಒದಗಿಸಿಕೊಟ್ಟು ಅನಂತರ ಅದರಂತೆ ಕೆಲಸಮಾಡದೇ ಹೋದರೆ ಅವನ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಆಮೇಲೆ ತೆಗೆದುಕೊಳ್ಳಬಹುದು. ಅನೇಕ ಜನ ಹತ್ತಿ ಬೆಳೆಯುವವರಿದ್ದಾರೆ. ಅವರ ಕಡೆಗೆ ಸ್ವಲ್ಪ ಯೋಚನೆ ಮಾಡಿ ಅವರಿಗೆ ಈಗ ಕೊಡುತ್ತಿರುವ ಬಿತ್ತನೆ ಬೀಜಗಳಿಂದ ಅನ್ಯಾಯವಾಗಿದ್ದರೆ ಅದನ್ನು ಉತ್ತಮ ಪಡಿಸಬಹುದು. ಅವರಿಗೆ ಅನುಕೂಲತೆ ಗಳನ್ನೇನೂ ಮಾಡಿಕೊಡದೇ ಈ ರೀತಿ ಮಾಡಿದರೆ ಸರಿಯೇ ಎಂದು ನಾನು ಹೇಳಬೇಕಾಗಿದೆ. ನಾನು ವೈಯ್ಯಕ್ತಿಕವಾಗಿ ತಿಳಿದುಕೊಂಡಿರುವ ಮಟ್ಟಿಗೆ ಸ್ವಲ್ಪ ಇದರ ಬಗ್ಗೆ ತಿಳಿಸುತ್ತೇನೆ.

ಇದರಲ್ಲಿರುವ ಪೆನಾಲ್ಟಿ ಕ್ಲಾಸಿನಲ್ಲಿ ಹೀಗಿದೆ :

> (1) Any person who, in any controlled area, knowingly and in contravention of the provisions of this Act or of any notification thereunder :—etc.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ನೋಟಿಫಿಕೇಷನ್ನೇನೂ ಹೊರಡಿಸುತ್ತೀರಿ. ಕಾನೂನು ಪ್ರಕಾರ ಅಧಿಕಾರಿ ಬಂದು ಪ್ರತಿಯೊಬ್ಬ ರೈತನ ಬಳಿಗೆ ಹೋಗಿ ಹತ್ತಿ ಬೆಳೆದಿದ್ದಾನೆಯೇ, ತಂಗ ಹಾಗೂ ಅಡಕೆ ಬೆಳೆದಿದಾನೆಯೇ, ಭತ್ತ, ರಾಗಿ ಬೆಳೆದಿದಾನೆಯೇ ಎನ್ನುವುದನ್ನೆಲ್ಲಾ ನೋಡುವುದಕ್ಕೆ ಯಾವ ಯಾವ ಅಧಿಕಾರಿ ಬರುತ್ತಾನೆ. ಅಲ್ಲಿ ಬಂದು ಹೇಗೆ ಕೆಲಸ ಮಾಡಬೇಕು ಎನ್ನುವುದನ್ನಾದರೂ ತಿಳಿಸುತ್ತಾರೆಯೇ? ನಿಮ್ಮ ಇಲಾಖೆಯಲ್ಲಿ ಎನ್. ಇ ಎಸ್. ಅಗ್ರಿಕಲ್‌ಚರು ಎಕ್ಸ್‌ಟೆನ್‌ಷನ್ನು ಆಫೀಸರುಗಳೆಂದು ತಗಲುಹಾಕಿಕೊಂಡು ಹೋಗುತ್ತಿದ್ದಿರಲ್ಲ ಅವರು ತಾವು ಹೋಗುವ ವೇಗದಷ್ಟು ವೇಗದಲ್ಲಿ ಹೋಗಿ ಕೆಲಸ ಮಾಡಿಕೊಂಡು ಬರುತ್ತಿದ್ದಾರೆಯೇ ಎನ್ನುವುದು ಗೊತ್ತಿದೆಯೇ! ಇದನ್ನು ಈ ಕಾನೂನಿನಲ್ಲಿ ತಾವೇಕೆ ಮಾಡಿಲ್ಲ! ಇಂತಹ ಪೆನಲ್ಟಿ ಕ್ಲಾನು ಎಂದು ಹಾಕಿಕೊಂಡು ಯಾರಿಗೆ ಬರೆಹಾಕಬೇಕೆಂದು ಮಾಡುತ್ತಿದ್ದೀರಿ! ಹತ್ತಿ ಎಕ್ಸ್‌ಪೋರ್ಟು ಮಾಡುವಂತಹ ಇಬ್ಬರು ಸ್ನೇಹಿತರು ಈ ಊರಿನಲ್ಲಿ ನನಗಿದ್ದಾರೆ. ಅವರುಗಳು ಮೂರು ಕೋಟಿ ರೂಪಾಯಿಗಳಷ್ಟು ಬೆಲೆಯ ಹತ್ತಿಯನ್ನು ಕೊಂಡುಕೊಳ್ಳಬೇಕಾಗಿದ್ದರೆ ಅವರು ಎಷ್ಟು ಕಷ್ಟಪಡುತ್ತಿದ್ದಾರೆ ಎನ್ನುವುದು ನನಗೆ ಚೆನ್ನಾಗಿ ಗೊತ್ತಿದೆ. ನಾವು ಈ ಉದ್ಯಮ ಚೆನ್ನಾಗಿ ಬೆಳೆಯಬೇಕು ಹಾಗೂ ನಮ್ಮ ಜನಕ್ಕೆ ಒಳ್ಳೆಯದಾಗಬೇಕು ಎಂದು ಇಂತಹ ಕಾನೂನು ತಂದು ಈ ರೀತಿ ಕಷ್ಟಗಳನ್ನು ಕೊಡುವುದು ಸರಿಯಾಗಿರುವುದಿಲ್ಲ. ಅಲ್ಲದೆ ಈ ಕಾನೂನನ್ನು ತರಲು ಅಷ್ಟು ಆತುರವೇನಿಲ್ಲ. ಅದುದರಿಂದ ಇದನ್ನು ಪೂರ್ಣವಾಗಿ ಪರಿಶೀಲನೆ ಮಾಡಲು ಅನುಕೂಲವಾಗುವಂತೆ ಸ್ವಲ್ಪ ವಾಪಸ್ಸು ತೆಗೆದುಕೊಳ್ಳಿ ಎಂದು ನಲಹೆ ಮಾಡುತ್ತಿದ್ದೆನೆ. ಇನ್ನೂ ಸ್ವಲ್ಪ ಯೋಚನೆ ಮಾಡಿ ನಿಮ್ಮ ಇಲಾಖೆಯಲ್ಲಿರುವ ಅಧಿಕಾರಿಗಳನ್ನೂ ಏಹ್ವಿಪ್ ಅಪ್ ಮಾಡಿ ಇರುವ ರೀಸರ್ಚು ಸ್ಕೀಮುಗಳನ್ನು ಚೆನ್ನಾಗಿ ಕೆಲಸ ಮಾಡುವಂತೆ ಮಾಡಿ ಒಳ್ಳೆಯ ಬೀಜವನ್ನು ಹಂಚುವಂತೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಇಲ್ಲದೇ ಹೋದರೆ ಇದು ಬರೀ ಕಾನೂನು ಎಂದು ಆಗಿ ಕಾನೂನಿನ ಕಡತಕ್ಕೆ ಸೇರಿಸುವುದಕ್ಕೋಸ್ಕರ ಮಾಡಿ ನೀವು ಹೆಸರು ತೆಗೆದುಕೊಂಡಂತಾಗುತ್ತದೆಯೇ ಹೊರತು ಇದರಿಂದ ಜನಕ್ಕೆ ಏನೇನೂ ಉಪಯೋಗ ಮಾಡಿದಂತಾಗುವುದಿಲ್ಲ. ಹತ್ತಿ ಬೆಳೆಯುವರಿಗೆ ಮತ್ತು ಹತ್ತಿ ನೂಲಿನ ಕೈಗಾರಿಕೆಗೂ ನಿಜವಾಗಿಯೂ ಏನೂ ಉಪಯೋಗ ಮಾಡಿ ಕೊಟ್ಟಂತಾಗುವುದಿಲ್ಲ. ಇದರಲ್ಲಿ ಯಾವ ಕಾಯದೆಯಲ್ಲಿ ಒಂದರಿಂದ ಹದಿನೇಳು ಕ್ಲಾಜುಗಳಿವೆ. ಇದರಲ್ಲಿ 3-4 ರಲ್ಲಿ ಹತ್ತಿ ಬೆಳೆಗಾರರಿಗೆ ಬಹಳ ಅನ್ಯಾಯ ವಾಗುವಂತೆ ಇದೆ, ಇದನ್ನು ತಾವು ಸ್ವಲ್ಪ ಕೂಲಂಕಷವಾಗಿ ಯೋಚನೆ ಮಾಡಿ ಕಾನೂನು ಕಡತಕ್ಕೇರಿಸುವುದಕ್ಕೆ ಮೊದಲು ಹತ್ತಿ ಬೆಳೆಯುವವರಿಗೆ ಮತ್ತು ಇದನ್ನು ಬೆಳೆಯುತಕ್ಕ ಪ್ರದೇಶದಲ್ಲಿ ಅನುಕೂಲವಾಗುವಂತೆ ಒಂದು ಸಮಗ್ರವಾದ ಕಾನೂನನ್ನು ಮಾಡಿ ತರಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

†ಶ್ರೀ ಜಿ. ನಾರಾಯಣಗೌಡ —ಸ್ವಾಮಿ, ಈ ಮಸೂದೆಯ ವಿಷಯವಾಗಿ ಅನೇಕ ಮಾನ್ಯ ಸದಸ್ಯರುಗಳು ಅನೇಕ ಸೂಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಅವರಿಗೆ ಆಭಾರಿ. ಪ್ರಥಮತಃ ಈಗ ತಾನೇ ಮಾತನಾಡಿದ ಶ್ರೀಮಾನ್ ಮುಕ್ಕಣ್ಣಪ್ಪನವರು, ಹೇಳಿದಂತೆ ಈ ಮಸೂದೆಯನ್ನು ಹೊಸದಾಗಿ ತಂದು ಬಿಟ್ಟು ಕಾನೂನಿನ ಕಡತಕ್ಕೇರಿಸಿ ಒಂದು ಹೆಸರು ತೆಗೆದುಕೊಳ್ಳಬೇಕೆಂದು ತಂದಿಲ್ಲ. ಬಹುಶಃ ಮಾನ್ಯ ಸದಸ್ಯರು ಈ ಕಾನೂನು ಮೊದಲಿಂದಲೂ ಈ ರಾಜ್ಯದಲ್ಲಿದೆ ಎಂದು ತಿಳಿದುಕೊಂಡಿದ್ದರೆ ಹೀಗೆ ಮಾತನಾಡುತ್ತ ಇರಲಿಲ್ಲ ಎಂದು ನನಗಾವರೂ ಅನಿಸುತ್ತದೆ. ತಮ್ಮೆಲ್ಲರಿಗೂತಿಳಿದ ಹಾಗೆ ನಾಲ್ಕು ಭಾಗಗಳಲ್ಲಿ ನಾಲ್ಕು ರೀತಿಯಾದ ಕಾನೂನುಗಳಿವೆ. ಅವನ್ನೆಲ್ಲಾ ಏಕರೂಪತೆಗೆ ತರುವುದಕ್ಕಾಗಿ ಈ ಮಸೂದೆಯನ್ನು ಈಗ ಸಭೆಯ ಮುಂದಿಡರಾಗಿದೆ. ಇದರ ಬಗ್ಗೆ ಹೇಳಿದ ಸಲಹೆಗಳನ್ನೆಲ್ಲಾ ಪರಿಶೀಲಸರಾಗುತ್ತದೆ. ಒಟ್ಟಿನಲ್ಲಿ ಈ ಬಿಲ್ಲಿನ ಬಗ್ಗೆ ಹೇಳಿದ ಸದಸ್ಯರೆಲ್ಲಾ ಹತ್ತಿ ಬೀಜ ನುಧಾರಿತವಾಗಿರುವುದು ನಮ್ಮ ರೈತರಿಗೆ ಸರಿಯಾಗಿ ದೊರಕುತ್ತಿಲ್ಲ ಮತ್ತು ಅದನ್ನು ಸರಬರಾಜು ಮಾಡಲು ನರ್ವೇ ಸಾಧಾರಣವಾಗಿ ಹೊಸ ನಮೂನೆಯ ಬೀಜವನ್ನು ಕಂಡು ಹಿಡಿಯಬೇಕಾದರೆ ಹತ್ತು ಹನ್ನೆರಡು ವರ್ಷಗಳಾದರೂ ಬೇಕು. ಮಾನ್ಯ ಸದಸ್ಯರುಗಳು ಹೇಳಿರತಕ್ಕದ್ದು ನೂಕ್ತವಾದಂತಹವುಗಳು. ಅದಕ್ಕೆ ಎಷ್ಟು ಗಮನ ಕೊಡಬಹುದೋ ಅಷ್ಟು ಗಮನವನ್ನು ಕೊಡುತ್ತೇನೆ. ಇದರೊಳಗೆ ಸಂಶೋಧನೆ ವಿಷಯದಲ್ಲಿ ಮಾನ್ಯ ಶ್ರೀ. ಎಂ. ಆರ್. ಪಾಟೀಲರವರು ಬಹಳ ಹೆಚ್ಚಾಗಿ ಮಾತನಾಡಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಎನು ಸಂಶೋಧನೆ ಪ್ರಾರಂಭ ಮಾಡಿದರೂ ಅದರಿಂದ ನಮ್ಮ ರೈತನಿಗೆ ಒಳ್ಳೆಯ ಬೀಜವನ್ನು ಕಂಡು ಹಿಡಿದು ಸರಬರಾಜು ಮಾಡ ಬೇಕಾದರೆ ಹತ್ತು ಹನ್ನೆರಡು ವರ್ಷಗಳಾದರೂ ಬೇಕಾಗುತ್ತದೆ ಇದರಲ್ಲಿ ನ್ಯೂ ಸ್ಪೇಪರ್ ಕಾಟನ್. ಎನ್ನುವುದನ್ನು ಮಲ್ಟಿಪ್ಲೈ ಮಾಡಿ ಅದನ್ನು ಇನೊಂದು ಕಡೆಗೆ ಕಳುಹಿಸಿ ಅದನ್ನು ಪರಿಶೋಧಿಸಿ ಸಾಕಾದಮು ಬೀಜವನ್ನು ರೈತನಿಗೆ ಒದಗಿಸಬೇಕಾದರೆ ಕನಿಷ್ಟ ಪಕ್ಷ ಹತ್ತು ವರ್ಷಗಳಾಗುತ್ತವೆ. ಬೀಜಗಳನ್ನು ಕಂಡು ಹಿಡಿಯಲು ಹತ್ತು ವರ್ಷಗಳ ಕಾರಾವಕಾಶಬೇಕಾಗುತ್ತದೆ. ಮಾನ್ಯ

ಸದಸ್ಯರಾದ ಶ್ರೀಮಾನ್ ಕೇಶವಮೂರ್ತಿಗಳು 5ನೇ ನಿಯಮದ (1) ರ ಪ್ರಕಾರ ಜಿಕ್ಸ್‌ಚ್ಯೈಲು ಮಿಲ್ಲಿಗೆ ಪರ್ಮಿಟ್ಟು ಕೊಟ್ಟು ಬಿಟ್ಟರೆ ಹೇಗೆ ಎಂದರು. ಈ ಕೈಗಾರಿಕೆಯಲ್ಲಿ ಅವರಿಗೇ ಗೊತ್ತಿರುವ ಹಾಗೆ ಜಿಕ್ಸ್‌ಚ್ಯೈನ್ಸ್ ಮಿಲ್ಲಿನವರು ಬೇರೆ ಬೇರೆ ಕಡೆಯಿಂದ ತಂದ ಹತ್ತಿಯನ್ನೂ ಬಚ್ಚೆ ಮಾಡ ಬೇಕಾಗುತ್ತದೆ. ಅವರು 10 ಕೌಂಟು 20ಕೌಂಟು. 40ಕೌಂಟು ಇತ್ಯಾದಿ ವಿವಿಧ ರೀತಿಯ ಬಚ್ಚೆ ಗಳನ್ನು ಮಾಡುವಾಗ ಅದಕ್ಕೆ ಸ್ಪೆಸಿಫೈಡ್ ಏರಿಯಾದಿಂದ ತಂದ ಹತ್ತಿಯನ್ನೂ ಬೆರಸಿಕೊಂಡು ಅವರಿಗೆ ಬೇಕಾಗುವಂತಹ 40—20 ಕೌಂಟುಗಳಂತೆ ಬಚ್ಚೆ ಮಾಡಲು ಪರ್ಮಿಟ್ಟು ಕೊಡಬೇಕಾಗುತ್ತದೆ. ಅದನ್ನು ಹೇಗೆ ಉಪಯೋಗಿಸಬೇಕು ಎನ್ನುವುದಕ್ಕೆ ನಿಯಮ ಮಾಡಿ ಕೊಂಡಿದ್ದೇವೆ, ಹಾಗೆ ಕೊಡ ದಿದ್ದರೆ ಕಾರ್ಖಾನೆಗಳಲ್ಲಿ ಬಚ್ಚೆ ಹೇಗೆ ತಯಾರಾಗುತ್ತದೆ ?

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಒಂದು ಸ್ಪೆಸಿಫೈಡ್ ಏರಿಯಾದ ರೈತರಿಂದ ಹತ್ತಿ ಯನ್ನು ತಂದು ಫ್ಯಾಕ್ಟರಿಯವರು ಮತ್ತು ಮಿಲ್ಲುಗಳವರು ಜಿನ್ನಿಂಗ್ ಮಾಡುತ್ತಿರುವುದನ್ನು ನೋಡಿದ್ದೇವೆ. ಕ್ಲಾಜ್ 3 (4) ರಲ್ಲಿ ಕಾಟನ್ ಮಿಕ್ಸ್ ಮಾಡುವ ವಿಚಾರದಲ್ಲಿ ನಿಬಂಧ ಹಾಕಲು ಅವಕಾಶ ತೆಗದುಕೊಂಡಿದ್ದೀರಿ. ಆದರೆ ಅದನ್ನು ಯಾವ ರೀತಿ ಮಿಕ್ಸ್ ಮಾಡಬೇಕು ಎನ್ನುವುದಕ್ಕೆ ಇದರಲ್ಲಿ ಯಾವ ಪ್ರಾವಿಸೋ ಕೂಡ ಇಲ್ಲ.

ಶ್ರೀ ಜಿ. ನಾರಾಯಣ ಗೌಡ.—ಈ ಬಿಲ್ಲಿನಲ್ಲೇ ಹೇಳಿದೆ. ಅದನ್ನು ತಾವು ನೋಡಬಹುದು. ಇದು ಬಂಡವಾಳ ಶಾಹಿಗಳಿಗೆ ಅನುಕೂಲವಾಗುವಂತೆ ತಂದಿರುವ ಮಸೂದೆ ಎಂದು ಶ್ರೀಮಾನ್ ಕೇಶವಮೂರ್ತಿಯವರು ಹೇಳಿದರು. ಇದರಲ್ಲಿ ಹೆಚ್ಚು ಭಾಗವಹಿಸುವವರು ಬೆಳೆಗಾರರು. ಬೆಳೆ ಗಾರರು ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಗೊಳಿಸುವುದಕ್ಕೆ ಅವರಿಗೆ ಯಾವರೀತಿಯ ನುಧಾರಿಸಿದ ಬೀಜಬೇಕು, ಯಾರು ಅದನ್ನು ಕೊಡಬೇಕು ಎನ್ನುವ ವಿಷಯಗಳಿಗೆ ಹೆಚ್ಚು ಗಮನ ಕೊಡಲು ಈ ಮಸೂದೆಯನ್ನು ತಂದಿರುವುದು. ಅದಕ್ಕೊಸ್ಕರವಾಗಿ ಇದು ಬಂಡವಾಳ ಶಾಹಿಗಳಿ ಗಾಗಿ ತಂದಂಥ ಮಸೂದೆಯಲ್ಲವೆಂದು ಅವರಿಗೆ ಸಮಾಧಾನವಾಗುತ್ತದೆಂದು ಕಾಣುತ್ತದೆ.

Plant protection ವಿಷಯದಲ್ಲಿ ಹೇಳಿದರು, ಹೆಚ್ಚು ರೋಗಗಳು ಬಂದು Plant protection ಕೆಲಸ ಸಮರ್ಪಕವಾಗಿ ನಡೆಯದೆ ಇದ್ದರೆ ಕಷ್ಟವಾಗುತ್ತದೆ ಎಂದು Plant Proection ಗೋಸ್ಕರ ತಮಗೆಲ್ಲರಿಗೂ ತಿಳಿದ ಹಾಗೆ ಪಂಪುಗಳನ್ನು subsidised rates ನಲ್ಲಿ ಕೊಡುತ್ತಿದ್ದೇವೆ. ಅದಲ್ಲದೆ fungicides and pesticides ಇವನ್ನೂ ಕೂಡ subsidised rates ನಲ್ಲಿ ಒದಗಿಸು ತ್ತಿದ್ದೇವೆ.

ಈ ಸಾರಿ ಹಾವೇರಿ ತಾಲ್ಲೂಕಿನೊಳಗೆ plant protection ಕೆಲಸವನ್ನು 30 ಸಾವಿರ ಎಕರೆ ಯೊಳಗೆ ನಾವು ತೆಗೆದುಕೊಂಡಿದ್ದೇವೆ. ಸರಕಾರದವರು ರೈತರಿಗೆ ಏನು ಸೌಕರ್ಯ ಆಗಬೇಕೋ ಅದನ್ನು ಕಲ್ಪನೆ ಮಾಡಿಕೊಡುವುದಕ್ಕೆ ಸಿದ್ಧರಾಗಿರಬೇಕು, ಅಷ್ಟುಮಾತ್ರವಲ್ಲ ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಅದನ್ನೆಲ್ಲ ಗಮನದಲ್ಲಿಟ್ಟು ಕೊಂಡು ನಾವು ನಡೆಯುವವರಾಗು ತ್ತೇವೆ. ಆದ್ದರಿಂದ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—The question is:

"That the Mysore Cotton Control Bill 1963 be taken into consideration".

The motion was adopted

Mr. SPEAKER.—The question is:

"That the clauses 2 to 4 both inclusive stand part of the Bill"

The motion was adopted

Clauses 2 to 4 both inclusive were added to the Bill

Mr. SPEAKER.—There is an amendment:

Sri H. R. KESHAVA MURTHY.—Sir, I beg to move:

"That in clause 5 in item (a) of the proviso to sub-clause (1), for the words "fully pressed bales" the words "beeras or Bales" shall be substituted".

Mr. SPEAKER.—Amendment moved:

"That in clause 5 in item (a) of the proviso to sub-clause (1), for the words "fully pressed bales" the words "beeras or Bales" shall be substituted."

ಶ್ರೀ ಎಚ್. ಆರ್. ಕೇಶವಮೂರ್ತಿ.—ಇವನ್ನು ನಾನು ಮೊದಲೇ ಹೇಳಿದ್ದೇನೆ. ಕ್ಲಾಜು 3, ಸಬ್ ಕ್ಲಾಜು 4ರಲ್ಲಿ ಹತ್ತಿಯನ್ನ ಬೆರಸ ಕೂಡದು ಎಂದು ಹೇಳಿದ್ದಾರೆ. Ginned Cotton of lint mix ಮಾಡುವುದಕೆ ಈ ಕ್ಲಾಜಿನಲ್ಲಿ ಅವಕಾಶವನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ. ಇದರಿಂದ ಏನಾಗುತ್ತದೆ ಎಂಬುದನ್ನು ನಾವು ನೋಡಬೇಕು. ಚಿಕ್ಕಬಳ್ಳಾಪುರ ಮಿಲ್ಲಿನಲ್ಲಿ ಬಟ್ಟೆಯನ್ನು ತಯಾರುಮಾಡುವ ಶಾಖೆಯಲ್ಲಿ ಹತ್ತಿಯನ್ನು ವಿಶ್ರಣಮಾಡಿ ಮಾರಾಟ ಮಾಡುವುದಕ್ಕೆ ಅವಕಾಶವಿದೆ. ಹೀಗೆ ಅವಕಾಶ ಕೊಡುವುದರಿಂದ ಬೂರಾನಾ ಅಥವಾ ಬೇಲ್ಸ್ ಮಾಡಿ ಎಂಬ ಪದಗಳನ್ನು 'fully pressed bales' ಎಂಬುದಕ್ಕೆ ಬದಲಾಗಿ ಸೇರಿಸಿದೆ ಇದ್ದರೆ. ಅತರಹ ಮಿಶ್ರಮಾಡಿದ ಹತ್ತಿಯನ್ನು ಹೊರಗಡೆ ಮಾರಾಟ ಮಾಡುವುದಕ್ಕೆ ಅವಕಾಶವಿದೆ. ಆದರಿಂದ ಈ ಮಿಲ್ಲುಗಳಲ್ಲಿ ಲಂಟ ಬೂರಾನಾ ಅಥವಾ ಬೇಲ್ಸ್ ಯಾವುದನ್ನು ಮಾಡುವುದಕ್ಕೂ ಅವಕಾಶ ಕೊಡಬಾರದು, ಹಾಗೆ ಮಾಡಲು ಅವಕಾಶ ಕೊಟ್ಟರೆ ಅದು ಹೊರಗೆ ಬಂದು ಕಾಳಸಂತೆಯಲ್ಲಿ ಮಾರಾಟವಾಗಲು ಅವಕಾಶವಾಗುತ್ತದೆ. ಆದುದರಿಂದ ನಾನು ಸೂಚಿಸಿರುವ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

Sri G. NARAYANA GOWDA.—I am not accepting the amendment, Sir

Mr. SPEAKER.—The question is.

"That in item (a) of the proviso to sub-clause (1), for the words "fully pressed bales" the words "Beeras or Blaes" shall de substituted".

The amendment was negatived

Mr. SPEAKER.—The question is:

"that clause 5 stand part of the Bill"

The motion was adopted

Clause 5 was added to the Bill

Sri H.R. KESHAVA MURTHY.—Sir, I beg to move:

"That in clause 6 in the last line of sub-item (i) of item (b), to sub-clause(1)between the words 'seedling' and 'or' the words 'for cultivating purposes' shall be inserted.

" In the 4th line of sub-item (ii) of item (b) to sub-clause (1) after the words 'seedling' and before the comma, the words 'for cultivation purposes' shall be inserted".

" sub-clause (2) shall be deleted."

Mr. SPEAKER.—Amendment moved:

"That in clause 6 in the last line of sub-item (i) of item (b) to sub-clause (1)between the words 'seedling and 'or', the words 'for cultivating purposes' shall be inserted.

"In the 4th line of sub-item (ii) of item (b) to sub-clause (1) after the word'seedling' and before the comma, the words 'for cultivating purposes shall be inserted."

"sub-clause (2) shall be deleted."

ಶ್ರೀ ಎಚ್. ಆರ್. ಕೇಶವಮೂರ್ತಿ.—ಸ್ಯೆಯಿ ಇದರಲ್ಲಿ ಹೀಗೆ ಹೇಳಿದ್ದಾರೆ.

6 (b) (i) ("Mixes or causes to be mixed any standard cotton, cotton seed or seedling with any other cotton, cotton seed or seedling or any prohibited variety of cotton, cotton or seedling with any standard cotton, cotton seed or seedling,"

ನಮ್ಮಲ್ಲಿ ಸಾಮಾನ್ಯವಾಗಿ ಪ್ರಾಹಿಬಿಟೆಡ್ ಎರಿಯಾ ಎಂದು ಇಲ್ಲ. ಏನು ಇದೆ ಎಂದರೆ ಬೀಜವನ್ನು ಹಾಕುವುದಕ್ಕೆ ಕೆಲವು ನಿರ್ಬಂಧಗಳನ್ನು ಹಾಕಿ ಕೆಲವು ಬೀಜ ಗಳನ್ನು ಉಪಯೋಗಿಸಬಾರದು ಎಂದು ನಿಷೇಧ ಮಾಡಿದ್ದಾರೆ. ಆ ವಿಚಾರದಲ್ಲಿ ನಾವು ಕಾನೂನು ಪ್ರಕಾರ ನಡೆಯುತ್ತೇವೆ. ಅದರೆ ಧನಗಳ ಮೇವಿಗೆ ಬೇರೆ ಹತ್ತಿ ಬೀಜವನ್ನು ತೆಗೆದುಕೊಳ್ಳಬೇಕಾಗು ತ್ತದೆ. ಸರ್ಕಾರದವರು ಹೇಳುವಂಥ ಸುಧಾರಿತ ಬೀಜಗಳು ಏನಿವೆ ಅವು ದನಗಳ ಮೇವಿಗೆ ಆಗುವು ದಿಲ್ಲ. ಆ ಬೀಜ ಬಹಳ ದಪ್ಪ. ದನಗಳಿಗೆ ಹಾಕಲು ಸಣ್ಣ ಬೀಜವನ್ನು ಬೇರೆ ಕಡೆಯಿಂದ ತರಿಸಿ ಕೊಳ್ಳಬೇಕಾಗುತ್ತದೆ. ಹತ್ತಿಯನ್ನು ಬೆಳೆಯಲು ಉಪಯೋಗಿಸುವ ಹತ್ತಿ ಬೀಜಕ್ಕೆ ಇಂಥಿಂಥದ್ದನ್ನು ಉಪಯೋಗಿಸಬಾರದು ಎಂದು ನಿಷೇಧ ಮಾಡಿ. ನಾವು ಬೇಡ ಎನ್ನುವುದಿಲ್ಲ ಆದರೆ ಪ್ರಹಿಬಿಟೆಡ್ ಎರಿಯಾದಲ್ಲಿ ದನಗಳ ಮೇವಿಗೆ ಬೇಕಾದ ಸಣ್ಣ ಬೀಜಗಳನ್ನು ವಾರಾಟ ಮಾಡಕೂಡದು ಎಂದರೆ ರೈತರಿಗೆ ಬಹಳ ತೊಂದರೆಯಾಗುತ್ತದೆ. ಹೀಗೆ ದನಗಳ ಮೇವಿಗೆ ಬೇಕಾದ ಸಣ್ಣ ಬೀಜವನ್ನು ತರಿಸಿಕೊಳ್ಳುವುದನ್ನು ನಿಷೇಧ ಮಾಡಿದರೆ ದನಗಳನ್ನು ಎಲ್ಲಿಗೆ ಹೊಡೆಯಬೆಕು ?

Sri M. R. PATIL.—This prohibits the mixture; it does not prohibit him for using it for cattle.

Sri H. R. KESHAVA MURTHY.—For cultivation purpose he may not mix, but for other purposes he may mix. The clause prohibits him even this.

ಆದುದರಿಂದ ಅಂಥ ಬೀಜಗಳನ್ನು ಇಟ್ಟುಕೊಂಡರೆ ಅಪರಾಧವಾಗುತ್ತದೆ ಎಂದು ಮಾಡಿದರೆ ಪ್ರೋಹಿಬಿಟೆಡ್ ಏರಿಯಾದಲ್ಲಿ ಬೇರೆ ಕೆಲಸಗಳಿಗೆ ಉಪಯೋಗಿಸುವುದಕ್ಕೆ ಅವಕಾಶವಿಲ್ಲದೆ ಇದ್ದರ ರೈತರಿಗೆ ಬಹಳ ತೊಂದರೆಯಾಗುತ್ತದೆ. ಇದರ ಕಡೆ ಮಂತ್ರಿಗಳು ದಯವಿಟ್ಟು ನೋಡಬೇಕು ಎಂದು ಹೇಳುತ್ತೇನೆ.

ಎರಡನೆ ಸಬ್ ಕ್ಲಾಜಿನಲ್ಲಿ

"(2) any person who in contravention of sub-section (1) of Section 4 raises cotton from cotton seed or seedling obtained from a person other than the authorised officer or a licensed dealer shall, on conviction, be punished with fine which may extend to fifty rupees."

ಎಂದು ಹೇಳಿದ್ದಾರೆ. ನಮಗೆ ಬೀಜ ಬೇಕಾದರೆ ಎಲ್ಲೋ ತೆಗೆದುಕೊಂಡು ಬರುತ್ತೇವೆ. ಯಾರಾದರೂ ಒಬ್ಬ ರೈತ ಬೆಳೆಯುತ್ತಾನೆ. ಅವನು ಹತ್ತಿಯನ್ನು ಜಿನಮಾಡಿ ವಾರಾಟ ಮಾಡುತ್ತಾನೆ. ಅಂಥವನಿಂದ ಬೀಜವನ್ನು ತೆಗೆದುಕೊಂಡು ಬರುತ್ತೇನೆ. ಅದು standard variety ಬೀಜ.

ಶ್ರೀ ಜಿ. ನಾರಾಯಣ ಗೌಡ.—ಬೀಜವನ್ನು ಎಲ್ಲೋ ತರಕೂಡದು. ಬೀಜವನ್ನು ಇಂಥವರೇ ವಾರಬೇಕು ಅಲ್ಲಿಯೇ ತರಬೇಕು ಎಂದು ಕಾನೂನಿನಲ್ಲಿ ಅಳವಡಿಸಿದ್ದೇವೆ

ಶ್ರೀ ಎಚ್. ಆರ್. ಕೇಶವಮೂರ್ತಿ.—ನೀವು standard variety cottoneಎಂದು ಹೇಳುವಾಗ ಅದರ ಬೀಜವನ್ನು ರೈತನು ಎಲ್ಲಿಂದಲಾದರೂ ತರಲಿ ಅದಕ್ಕೆ ಆಕ್ಷೇಪಣೆ ಇರಕೂಡದು. ಇದರ ಬಗ್ಗೆ ನಿರ್ಬಂಧ ಮಾಡುವುದರಿಂದ ಬ್ರೀಡರ್ ಅಥವಾ ಬೇರೆ ಏಜನ್ಸಿಯನ್ನು ಮುನಾಪಲು ಮಾಡುತ್ತ ಇದ್ದೀರಿ. ರೈತನ ಹಿತವನ್ನು ರಕ್ಷಣೆ ಮಾಡುತ್ತ ಇಲ್ಲ, ರೈತನ ಹಿತವನ್ನು ಕಾಪಾಡಬೇಕಾದರೆ ಒಂದು standard variety of seed ಇರುತ್ತದೆ.

Whether he takes it from the registered grower or some other person, why not he get the same variety of seed from any other man, why this prohibition should be there?

Mr. SPEAKER.—The question is :

"That in the last line of sub-item (i) of item (b) to sub-clause (1) between the words 'seeding' and 'or' the words 'for cultivating purposes' shall be inserted."

"In the 4th line of sub-item (ii) of item (b) to sub-clause (i) after the word 'seedling' and before the 'comma,' the words 'for cultivation purposes' shall be inserted.

"Sub-clause (2) shall be deleted."

The amendment was negatived.

Mr. SPEAKER.—The question is :

"That clause 6 stand part of the Bill."

The motion was adopted.

Clause 6 was added to the Bill.

Mr. SPEAKER.—The question is :

"That Clauses 7 to 17 both inclusive stand part of the Bill."

The motion was adopted.

Clauses 7 to 17 were added to the Bill.

CLAUSE 1, THE TITLE AND THE PREAMBLE

Mr. SPEAKER.—The question is :

"That clause 1, the Title and the Preamble stand part of the Bill."

The motion was adopted.

Clause 1, the title and the preamble were added to the Bill.

Motion to pass.

Sri G. NARAYANA GOWDA.—I beg to move :

"That the Mysore Cotton Control Bill, 1963, be passed."

Mr. SPEAKER.—The question is :

"That the Mysore Cotton Control Bill, 1963, be passed."

The motion was adopted.

The Mangalore Port Trust (Amendment) Bill, 1963.

Sri VEERENDRA PATIL.—I beg to move :

"That the Mangalore Port Trust (Amendment) Bill, 1963, be taken into consideration."